ಕೆ. ಮೋಹನಕೃಷ್ಣ ರೈ

ನಗರೀಕರಣ



ನಗರೀಕರಣ

ಕೆ. ಮೋಹನಕೃಷ್ಣ ರೈ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

NAGARIKARANA ***(Urbanization)*** - By K. Mohanakrishna Rai, Published by The Director, Prasaranga, Kannada University, Hampi, Vidyaranya, Kamalapura - 583 221 First Impression 1997, Pp ii + 26 Rs. 2-00

ಮಂಟಪ ಮಾಲೆ ೩೦

ಪ್ರಕಾಶಕರು

ಎ. ವಿ. ನಾವಡ

ನಿರ್ದೇಶಕರು, ಪ್ರಸಾರಾಂಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ, ಕಮಲಾಪುರ ೫೮೩ ೨೨೧

ಬೆಲೆ ರೂ. ೨.೦೦

ಮುದ್ರಕರು :

ಫ. ಶಿ. ಭಾಂಡಗೆ ☎ : 28617

ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್

ದಾಲಮಿಲ್ ಕಂಪೌಂಡ್, ಕಾಗದಗೇರಿ ಓಣಿ, ಗದಗ-೫೮೨ ೧೦೧.

☎ : 25509, 27566 (O) 26578 (R)

ಹಿನ್ನೆಲೆ

ನಗರಗಳು ಪ್ರಾಚೀನ ಕಾಲದಿಂದಲೂ ನಾಗರಿಕ ಜೀವನದ ಸಂಕೇತವಾಗಿದ್ದರೂ ನಗರಗಳ ಬಗ್ಗೆ ಅಧ್ಯಯನ ಮಾಡುವುದು ಇತ್ತೀಚೆಗೆ ಬೆಳೆದು ಬಂದಿರುವ ಶೈಕ್ಷಣಿಕ ಶಿಸ್ತು. ನಗರದ ನಿಜಾರ್ಥವನ್ನು ತಿಳಿಯಬೇಕಾಗಿದ್ದರೆ ಅದನ್ನು ಇತಿಹಾಸದ ಹಿನ್ನೆಲೆಯಿಂದಲೇ ಅಭ್ಯಸಿಸುವುದು ಸೂಕ್ತ. ಇತ್ತೀಚಿನ ದಿನಗಳಲ್ಲಿ ನಾವು ಕಂಡುಕೊಂಡ ವಿಷಯವೇನೆಂದರೆ, ನಗರದ ಇತಿಹಾಸವನ್ನು ಅಭ್ಯಾಸ ಮಾಡುವುದು. ಒಂದು ಸಮಾಜದ ಸಾಮಾಜಿಕ ಮತ್ತು ಆರ್ಥಿಕ ದೃಷ್ಟಿಯಿಂದ ಪ್ರಾಮುಖ್ಯವಾದದ್ದು. ಮಾನವ ಜೀವನದ ವಿಕಾಸದಲ್ಲಿ ನಗರವು ಒಂದು ವಿಶಿಷ್ಟ ಹಂತವಷ್ಟೆ. ಮಾನವನು ತನ್ನ ಜೀವನ ಶೈಲಿಯಲ್ಲಿ ಎಷ್ಟು ಮಾರ್ಪಾಡು ಮಾಡಿಕೊಂಡಿದ್ದಾನೆಂಬುದನ್ನು ಇದು ತಿಳಿಸುತ್ತದೆ. ಮತ್ತು ಈ ಬದಲಾವಣೆಗೆ ಯಾವೆಲ್ಲಾ ಅಂಶಗಳು ಕಾರಣಗಳಾಗಿವೆ ಎನ್ನುವುದೂ ತಿಳಿಯುತ್ತದೆ. ಮಾನವನ ನಾಗರಿಕತೆಯನ್ನು ರೂಪಿಸುವಲ್ಲಿ ನಗರದ ಪಾತ್ರವು ಮಿಶ್ರವಾದದ್ದಾಗಿದೆ. ಒಂದು ರೀತಿಯಲ್ಲಿ ನಗರವು ಮಾನವನನ್ನು ಹಳ್ಳಿ ಜೀವನದ ಅಂಧಕಾರ ಮತ್ತು ಸಂಪ್ರದಾಯದ ಬಿಗಿ ಮುಷ್ಟಿಯಿಂದ ಸ್ವತಂತ್ರಗೊಳಿಸಿದೆ ಮತ್ತು ಆತನ ಜೀವನವನ್ನು ಶ್ರೀಮಂತಗೊಳಿಸಿದೆ ಎಂದು ವ್ಯಾಖ್ಯಾನಿಸಲು ಅವಕಾಶಗಳಿವೆ. ಇನ್ನೊಂದು ರೀತಿಯಲ್ಲಿ ನಗರ ಜೀವನವು ಮಾನವನನ್ನು ಯಾಂತ್ರಿಕ ಜೀವಿಯನ್ನಾಗಿಸಿದೆ. ಮಾನವ ಸಂಬಂಧಗಳ ಗುಣಮಟ್ಟ ಹೆಚ್ಚು ಅ-ವೈಯಕ್ತಿಕ ವಾಗಿಯೂ, ಔಪಚಾರಿಕವಾಗಿಯೂ ಮಾರ್ಪಾಡಾಗುವಂತೆ ಮಾಡಿದೆ.

ಕೈಗಾರಿಕಾ ಕ್ರಾಂತಿಯ ಪೂರ್ವೇತಿಹಾಸವನ್ನು ಗಮನಿಸಿದಾಗ, (ಹೆಚ್ಚಿನ ಎಲ್ಲಾ ಸಾಮಾಜಿಕ ಚಿಂತಕರ ಪ್ರಕಾರ) ನಗರಗಳು ಸಮಾಜದ ಪ್ರತಿಬಿಂಬವೇ ಆಗಿವೆ. ಪ್ರಾಚೀನ ಜಗತ್ತಿನ ಪ್ಲೇಟೋ, ಅರಿಸ್ಟಾಟಲ್, ಕೌಟಿಲ್ಯ ಮತ್ತು ಅಗಸ್ಟಿನ್, ಮಧ್ಯಯುಗೀನ ಕಾಲದ ಮೆಕ್ಯಾವಿಲಿ, ಹದಿನೇಳನೆ ಶತಮಾನದ ಜಿಯಾನ್ ಬೊದಿನ್ ಮತ್ತು ಹದಿನೆಂಟನೆಯ ಶತಮಾನದ ರೂಸ್ಸೋ ಇವರುಗಳ ಚಿಂತನೆಯು ನಗರಗಳನ್ನು ಒಂದು ವಿಶೇಷವಾದ ಸಮಾಜ ಎಂದು ಗುರುತಿಸಿದೆ. ಆದರೆ ಕೈಗಾರಿಕಾ ಕ್ರಾಂತಿಯ ನಂತರ ಈ ನಂಬಿಕೆ ಬೇರೆ ರೂಪವನ್ನು ಪಡೆದಿದೆ. ಇದಕ್ಕೆ ಮುಖ್ಯ ಕಾರಣ: ನಗರಗಳ ಸ್ವರೂಪದಲ್ಲಾದ ಬದಲಾವಣೆ. ಈ ಬದಲಾವಣೆಯಿಂದಾಗಿ ನಗರಗಳ ಅಧ್ಯಯನ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದುಕೊಂಡಿರಬೇಕು. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ನಗರಗಳ ಅಧ್ಯಯನ ಹೊಸ ಹುರುಪಿನಿಂದ ಪ್ರಾರಂಭವಾದರೂ ಭಾರತದಲ್ಲಿ ಇಲ್ಲಿಯ ಭಿನ್ನ ಸಾಮಾಜಿಕ ಪರಿಸ್ಥಿತಿಯಿಂದಾಗಿ ವಿಳಂಬವಾಯಿತೆಂದು ತೋರುತ್ತದೆ.

ನಗರಕ್ರಾಂತಿ

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಕೈಗಾರಿಕಾ ಕ್ರಾಂತಿ ಮತ್ತು ತಾಂತ್ರಿಕ-ಕ್ರಾಂತಿಯ ಸಮಯದಲ್ಲೇ ಮಹತ್ವದ ನಗರಕ್ರಾಂತಿಯೂ ಆಗಿದೆ. ಮಿಲಿಯಗಟ್ಟಲೆ ಜನರು ಗ್ರಾಮೀಣ

ಪ್ರದೇಶದಿಂದ ನಗರ ಪ್ರದೇಶಕ್ಕೆ ವಲಸೆ ಬಂದರು; ಚಿಕ್ಕಪುಟ್ಟ ಪೇಟೆ-ಪಟ್ಟಣಗಳು ಬೃಹತ್ ನಗರಗಳಾಗಿ ಬೆಳೆದವು. ನಗರ ಪ್ರದೇಶಕ್ಕೆ ವಲಸೆ ಬಂದ ಜನರು ನಗರ ಕ್ರಾಂತಿಗೆ ತಮ್ಮನ್ನು ತಾವೇ ತೊಡಗಿಸಿಕೊಂಡರು. ಈ ರೀತಿಯ ಕ್ರಾಂತಿಕಾರಿ ಇಲ್ಲವೇ ಕ್ಷಿಪ್ರಗತಿಯ ಬದಲಾವಣೆಯು ಸಾಮಾಜಿಕವಾಗಿ ಅಂಗವೈಕಲ್ಯಗೊಂಡ ನಾಗರೀಕತೆಯ ಉಗಮಕ್ಕೆ ನಾಂದಿಯಾಗುವುದು ಸಹಜ. ಇದು ಬದುಕನ್ನು ಯಾಂತ್ರಿಕ ಮತ್ತು ಕೃತಕವನ್ನಾಗಿಸುತ್ತದೆ. ನಗರ ಜೀವನವು ತನ್ನೆಲ್ಲಾ ಸ್ವಾರಸ್ಯವನ್ನು ಕಳೆದುಕೊಳ್ಳುತ್ತದೆ. ಅದು ನಕ್ಷತ್ರಗಳೇ ಇಲ್ಲದ ಆಕಾಶದಂತೆ, ವಾಸ್ತುವೇ ಇಲ್ಲದ ಕಟ್ಟಡದಂತೆ, ರುಚಿಯಿಲ್ಲದ ಅಡುಗೆಯಂತೆ, ಸಂತೋಷವೇ ಇಲ್ಲದ ಸಂತೋಷಕೂಟದಂತೆ ಆಗುತ್ತದೆ. ನಗರಗಳ ಸ್ವರೂಪದಲ್ಲಾಗುವ ಬದಲಾವಣೆ, ಜನಸಂಖ್ಯೆಯ ಒತ್ತಡ, ಬಡತನ, ನಿರುದ್ಯೋಗ, ಪರಿಸರಮಾಲಿನ್ಯ ಇವೇ ಮುಂತಾದ ಕಾರಣಗಳಿಂದಾಗಿ ಅಂಗವೈಕಲ್ಯಗೊಂಡ ಸಮಾಜದ ಸೃಷ್ಟಿಯಾಗುತ್ತದೆ.

ವಿ. ಗೊರ್ಡಾನ್ ಜೈಲ್ಡ್ ಎನ್ನುವವರು ನಗರಕ್ರಾಂತಿ ಎಂಬ ಪರಿಕಲ್ಪನೆಯನ್ನು ಈ ರೀತಿ ವ್ಯಾಖ್ಯಾನಿಸಿದ್ದಾರೆ.

1) ಮೊದಲ ಪಟ್ಟಣಗಳು ಹೆಚ್ಚು ಜನಸಂಖ್ಯೆಯನ್ನು ಹೊಂದಿದ್ದವು, ಏಕೆಂದರೆ; ಅಲ್ಲಿ ಗ್ರಾಮ ಮತ್ತು ನಗರವೆಂಬ ಎರಡು ಬೇರೆ ಬೇರೆ ವ್ಯವಸ್ಥೆ ಇನ್ನೂ ರೂಪು ಗೊಂಡಿರಲಿಲ್ಲ.

2) ನಗರ ಮಿತಿಯ ಹೊರಗಡೆ ಕೃಷಿಕರು ವ್ಯವಸಾಯ ಮಾಡುತ್ತಿದ್ದರು ಮತ್ತು ಕೃಷಿಯೇತರ ಜನರು ಕೃಷಿಕರ ಹೆಚ್ಚುವರಿ ಉತ್ಪಾದನೆಯನ್ನು ಅವಲಂಬಿಸಿದ್ದರು.

3) ಪ್ರತಿಯೊಬ್ಬ ಕೃಷಿಕನೂ ತನ್ನ ಹೆಚ್ಚುವರಿ ಉತ್ಪಾದನೆಯನ್ನು ದೇವತೆಗೆ ಅಥವಾ ದೇವಾಂಶಸಂಭೂತ, ಪರೋಕ್ಷವಾಗಿ ಮುಖಂಡನಿಗೆ ಕೊಡಬೇಕಾಗಿತ್ತು. ಈ ರೀತಿಯಾಗಿ ಹೆಚ್ಚುವರಿ ಉತ್ಪಾದನೆಯು ಒಂದೇ ಕಡೆ ಕೇಂದ್ರೀಕರಿಸಲ್ಪಟ್ಟಿತ್ತು.

4) ಬೃಹತ್ ಕಟ್ಟಡಗಳು ನಿರ್ಮಾಣಗೊಂಡವು ಮತ್ತು ಇವು ನಗರಗಳನ್ನು ಗ್ರಾಮದಿಂದ ಬೇರ್ಪಡಿಸಿದವು. ಈ ಪ್ರಕ್ರಿಯೆಯು ಗ್ರಾಮ ಮತ್ತು ನಗರವೆನ್ನುವ ಎರಡು ಹೊಸ ವ್ಯವಸ್ಥೆಗೆ ದಾರಿಯಾಯಿತು.

5) ಹೆಚ್ಚುವರಿ ಉತ್ಪಾದನೆಯು ವಿದೇಶೀ ವ್ಯಾಪಾರಕ್ಕೂ ಎಡೆಮಾಡಿಕೊಟ್ಟಿತು. ಇವು ಜೈಲ್ಡ್‌ರವರ 'ನಗರಕ್ರಾಂತಿ' ಎಂಬ ಪರಿಕಲ್ಪನೆಯಲ್ಲಿ ಅಡಕವಾಗಿರುವ ಮುಖ್ಯ ಅಂಶಗಳೇ ಆಗಿವೆ. ಆದರೆ, ವಿಮರ್ಶಕರ ಕೈಯಲ್ಲಿ ಜೈಲ್ಡ್‌ಯವರ ನಗರಕ್ರಾಂತಿ ಎಂಬ ಪರಿಕಲ್ಪನೆ ಹಲವು ವಿಧದ ವ್ಯಾಖ್ಯಾನಗಳಿಗೆ ತುತ್ತಾಯಿತು. ಈ ವಾದ ಪ್ರತಿವಾದಗಳು ಕೇವಲ ಶೈಕ್ಷಣಿಕ ಆಸಕ್ತಿಯಿಂದ ಪ್ರೇರಿತಗೊಂಡಿವೆ ಎನ್ನುವುದು ನಾವು ಈ ಹೊತ್ತು ಗಮನದಲ್ಲಿರಿಸಬೇಕಾದ ಅಂಶ.

ನಗರೀಕರಣದ ಪರಿಕಲ್ಪನೆ

ನಗರೀಕರಣದಲ್ಲಿ ಅಸ್ತವ್ಯಸ್ತತೆಗಳು, ಅಸಮತೋಲನಗಳು, ಸಹಜವಾಗಿದ್ದರೂ, ನಮಗೆ ಗಾಬರಿಯನ್ನು ಹುಟ್ಟಿಸುತ್ತವೆ. ಅತಿರೇಕದ ನಗರೀಕರಣ ಅಂದರೆ ಸಾಕಷ್ಟು ಪೌರಸೌಲಭ್ಯಗಳಿಲ್ಲದೆ ಒಂದೇ ಸಮನೆ ಜನಸಂಖ್ಯೆ ಬೆಳೆಯುವುದು ಮತ್ತು ಅರೆ-ನಗರೀಕರಣ ಅಂದರೆ ಸುತ್ತಿನ ಪ್ರದೇಶಗಳಲ್ಲಿ ಭೂಮಿಯನ್ನು ಕೃಷಿಯೇತರ ಕಾರಣಗಳಿಗೆ ಬಳಸುವುದು ಎಂದೇ ಅರ್ಥ. ಆಮೇಲೆ ನಗರಮಿತಿಯೊಳಕ್ಕೆ ಸೇರ್ಪಡೆಗೊಳಿಸುವುದು ಇವು ಕೆಲವು ಗಂಡಾಂತರಗಳನ್ನು ಒಡ್ಡುತ್ತವೆ. ಮತ್ತು ನಗರ ಜೀವನದ ಶಾಂತಿಯನ್ನು ಕದಡುತ್ತಲೇ ಇರುತ್ತವೆ. ಈ ಸಂಗತಿಯನ್ನು ನಾವು ಮರೆಯುವಂತಿಲ್ಲ. ವಾಸ್ತವವಾಗಿ ಈ ಪರಿಸ್ಥಿತಿ ಬೆಳೆದು ಒಂದು ದಿನ ಸ್ಫೋಟಕ-ಮಟ್ಟ ತಲುಪಬಹುದು. ವ್ಯಾಪಾರ ವ್ಯವಹಾರದಲ್ಲಿ, ತಂತ್ರಜ್ಞಾನದಲ್ಲಿ, ವೈಜ್ಞಾನಿಕತೆಯಲ್ಲಿ ಸಾಕಷ್ಟು ಹೊಸತನವನ್ನು ಗಿಟ್ಟಿಸಿದರೂ ನಗರ ಜೀವನ ಮಾಲಿನ್ಯಕ್ಕೊಳಪಟ್ಟಿದೆ; ದಿಕ್ಕು ದೆಸೆಯಿಲ್ಲದೆ ಪ್ರಗತಿ ಹೊಂದುತ್ತಿರುವ ನಮ್ಮ ನಗರಗಳನ್ನು ಕಂಡಾಗ ಮುಂದೆ ಬರಬಹುದಾದ ಸಮಸ್ಯೆಗಳಿಗೆ ಕಡಿವಾಣ ಹಾಕುವಷ್ಟು ನಾವು ಸಮರ್ಥರೇ ಎನ್ನುವ ಭೀಕರವಾದ ಸಮಸ್ಯೆ ಈಗ ನಮ್ಮ ಮುಂದೆ ಎದುರಾಗುತ್ತದೆ. ಮುಂದುವರಿದ ರಾಷ್ಟ್ರಗಳ ನಗರಗಳು ಆರ್ಥಿಕ ಪ್ರಗತಿಯ ಸಾಧನಗಳಾಗಿವೆಯಷ್ಟೆ. ಮುಂದುವರಿಯುತ್ತಿರುವ ರಾಷ್ಟ್ರಗಳ ನಗರಗಳು ವಸಾಹತುಶಾಹಿ ಆಳ್ವಿಕೆಯ ಶೋಷಣೆಗೆ ಬುನಾದಿಗಳಾಗಿವೆ. ಈ ಸಂಗತಿಗಳನ್ನೂ ನಾವು ಮರೆಯುವಂತಿಲ್ಲ ಹಾಗೂ ಈಗ ಅವುಗಳ ಬೆಳವಣಿಗೆಯು ಕುಂಟುತ್ತಾ ಸಾಗುತ್ತವೆ. ಇವು ಇತಿಹಾಸದಲ್ಲಿ ಮಹತ್ವದ ಪರೀಕ್ಷೆಯನ್ನು ಎದುರಿಸುತ್ತಿವೆ. ಸಂಪ್ರದಾಯದ ಚೌಕಟ್ಟನ್ನು ಮುರಿದು ಹೊರಬರಲು ಪ್ರಯತ್ನಿಸುವ ಮಾನವ ನಗರ ವ್ಯವಸ್ಥೆಯ ಅವ್ಯವಸ್ಥೆಯಲ್ಲಿ ಭಾಗಿಯಾಗಿ ತನ್ನ ಕೊಡುಗೆಯನ್ನು ನೀಡುತ್ತಾ ನಾಗರಿಕನು ಬಂದಿದ್ದಾನೆ, ಇದರಿಂದಾಗಿ ಭ್ರಮನಿರಸನಗೊಂಡ ಸಮಾಜದ ಸೃಷ್ಟಿಯಾಗುತ್ತದೆ. ನಾವು ಇಲ್ಲಿಗೆ ಬಂದಿದ್ದು ನಗೆಯಾಡಲಿಕ್ಕೋ ಅಥವಾ ಆಳುವುದಕ್ಕೋ? ನಾವು ಸಾಯುತ್ತಿದ್ದೇವೆಯೋ ಅಥವಾ ಹುಟ್ಟುತ್ತಿದ್ದೇವೆಯೋ? ಒಂದೂ ಅರಿಯದ ಕಲ್ಪನಾ ಲೋಕದಲ್ಲಿ ಮಾನವ ಯಾಂತ್ರಿಕವಾಗಿ ಹುಟ್ಟುತ್ತಿರುತ್ತಾನೆ ಮತ್ತು ಸಾಯುತ್ತಿರುತ್ತಾನೆ. ತನ್ನ ಗೋರಿಯನ್ನು ತಾನೇ ನಿರ್ಮಿಸುತ್ತಾನೆ ಎಂದರೂ ತಪ್ಪಾಗಲಾರದು. ಇದು ಆಧುನಿಕ ನಗರೀಕರಣದ ಸಮಸ್ಯೆಗಳಲ್ಲಿ ಕೆಲವು. ಇವನ್ನು ಹಲವು ನೆಲೆಗಳಲ್ಲಿ ವ್ಯಾಖ್ಯಾನಿಸಿಕೊಳ್ಳುವ ಅಗತ್ಯ ಇದೆ.

ಮಾನವನ ಸ್ಥಿತಿಗತಿಗಳಿಗೆ ಸಂಬಂಧಿಸಿದಂತೆ ಜಗತ್ತನ್ನು ಅಖಂಡಗೊಳಿಸುವಲ್ಲಿ ಜಾಗತಿಕ ಸ್ವರೂಪದ ನಗರತ್ವ ಮತ್ತು ಜಾಗತಿಕ ಸ್ವರೂಪದ ಔದ್ಯೋಗೀಕರಣಗಳು ಈ ಹೊತ್ತು ನಮ್ಮ ಮುಂದಿವೆ. ಪಟ್ಟಣಗಳು ಮತ್ತು ನಗರಗಳು ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿವೆಯಾದರೂ ಇಂದು ಅವುಗಳ ಸ್ವರೂಪವು ಅಂದಿಗಿಂತಲೂ ವಿಭಿನ್ನ ಬಗೆಯವಾಗಿವೆ. ಜಗತ್ತಿನ ಜನಸಂಖ್ಯೆಯಲ್ಲಿ ಇಂದು ನಗರವಾಸಿಗಳ ಶೇಕಡಾವಾರು

ಪ್ರಮಾಣವು ಗಣನೀಯವಾಗಿ ಹೆಚ್ಚಿದೆ. ಇಷ್ಟೊಂದು ಹೆಚ್ಚಿನ ಸಂಖ್ಯೆಯಲ್ಲಿ ಜನರು ನಗರಗಳಲ್ಲಿ ಜೀವಿಸುತ್ತಿರುವುದು ಮಾನವನ ಇತಿಹಾಸದಲ್ಲಿ ಎಂದೂ, ಎಲ್ಲಿಯೂ ಕಂಡು ಬಾರದ ಸಂಗತಿಯಾಗಿದೆ. ಇದು ಐತಿಹಾಸಿಕವಾಗಿ ನಾವು ಗಮನಿಸಬೇಕಾದ ಸಂಗತಿ. ಇಂದು ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ನಗರೀಕರಣ ಪ್ರಕ್ರಿಯೆಯು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗಿಂತ ತೀವ್ರ ಚುರುಕಾಗಿದೆ. ನಗರೀಕರಣವು ಅನೇಕ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ನೈತಿಕ ಸಮಸ್ಯೆಗಳನ್ನು ಸೃಷ್ಟಿಸುತ್ತವೆಯಾದರೂ, ಅದು ಪ್ರತಿಯೊಂದು ಸಮಾಜದ ಬೆಳವಣಿಗೆಯ ಆವಶ್ಯಕ ಲಕ್ಷಣವಾಗಿದೆ. ನಗರವು ರಾಷ್ಟ್ರದ ಪ್ರಗತಿಯ ಸೂಚಿಯಾಗಿದೆ ಎಂಬುದು ಇತಿಹಾಸದಿಂದ ತಿಳಿದು ಬರುವ ಸಂಗತಿಯಷ್ಟೆ. ಆದರೆ, ನಗರಗಳು, ರಾಷ್ಟ್ರದ ನರನಾಡಿಗಳಂತೆ ಇಂದು ಕಾರ್ಯನಿರ್ವಹಿಸುತ್ತವೆ. ಪ್ರತಿಯೊಂದು ರಾಷ್ಟ್ರದ ಇತಿಹಾಸದಲ್ಲಿ ನಗರಗಳ ಪಾತ್ರ ಹಿರಿದಾದುದು. ಅದನ್ನು ನಾವು ಮರೆಯು ವಂತಿಲ್ಲ. ಪ್ರಪಂಚದ ಎಲ್ಲಾ ನಗರಗಳಲ್ಲೂ ಕಣ್ಣಿಗೆ ಬಡಿದು ತೋರುವ ಗುಣವಿಶೇಷಗ ಳೆಂದರೆ, ವಿಭಿನ್ನರೂಪಗಳು, ಮಿತ ಸ್ವರೂಪದ ಸಾಮಾಜಿಕ ಸಂಪರ್ಕಗಳು, ಸ್ವಯಂ ಪ್ರೇರಿತ ಸಂಘ, ಅವ್ಯೆಯಕ್ತಿಕತೆ, ನೈತಿಕತೆಯ ಶೈಥಿಲ್ಯ ಇತ್ಯಾದಿಗಳೇ ಆಗಿವೆ. ಅವು ನಗರಗಳಲ್ಲಿ ಇಟ್ಟು ಕೊಂಡಿರುವ ಸಾಮಾಜಿಕ ಸಂಬಂಧಗಳು ಅನೇಕವೂ, ವೈವಿಧ್ಯಮಯವೂ ಆಗಿವೆ. ಅವುಗಳು ಸಾಮಾನ್ಯವಾಗಿ ಔಪಚಾರಿಕ ಸ್ವರೂಪದವುಗಳಾಗಿವೆ. ಇದನ್ನು ನಾವು ಮರೆಯುವಂತಿಲ್ಲ.

ನಗರೀಕರಣ : ಸಮಸ್ಯೆಗಳು

ನಗರ ನಾಗರೀಕತೆಯು ಮಾನವನಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನುಂಟು ಮಾಡಿದೆ. ಈ ಬದಲಾವಣೆಯನ್ನು ಒತ್ತಾಯಿಸುವ ಶಕ್ತಿಗಳು ವಿವಿಧ ರೂಪಗಳಲ್ಲಿ ನಮ್ಮೊಡನೆ ಸಂವರ್ಧಿಸಿವೆ. ಅವುಗಳು ಒಂದರೊಳಗೊಂಡು ಮೇಳೈಸಿ ಪ್ರತ್ಯೇಕಿಸಲು ಬಾರದ ರೀತಿಯಲ್ಲಿ ಸಂಕೀರ್ಣ ಸ್ವರೂಪವನ್ನು ತಳೆದಿವೆ. ಅವುಗಳ ಒಲವುಗಳು ಇಂತಹದೇ ನಿರ್ದಿಷ್ಟ ಪರಿಣಾಮಗಳನ್ನು ಬೀರಬಹುದೆಂಬುದನ್ನು ಭವಿಷ್ಯೋಕ್ತಿಯಾಗಿ ನಿರ್ಧರಿಸುವುದು ಇಂದು ಕಷ್ಟಕರವಾಗಿದೆ. ಹೀಗಾಗಿ ನಗರಗಳ ಅಧ್ಯಯನವು ಕ್ಲಿಷ್ಟ ವಿಷಯವನ್ನೊಳ ಗೊಂಡಿವೆ. ನಗರ ವ್ಯವಸ್ಥೆ ವಿಭಿನ್ನ ಸ್ವರೂಪದ ಮಾನವ ಬದುಕಿನ ಮತ್ತು ದುಡಿಮೆಯ ತಾಣ ಮತ್ತು ನಿರಂತರತೆಯನ್ನೊಳಗೊಂಡು ಸಂಘಟಿತ ಸಮಾಜವಾಗಿದೆ. ನಗರ ಜೀವನದ ಸಂಕೀರ್ಣತೆ ಮತ್ತು ತೋರಿಕೆಯಲ್ಲಿ ಕಂಡು ಬರುವ ಅಸ್ತವ್ಯಸ್ತತೆಯ ಮಧ್ಯೆ ಸಂಘಟನೆ ಎದುರಿಗೆ ಇದೆ. ನಗರ ಜೀವನದ ಈ ಎಲ್ಲ ಸಂಕೀರ್ಣ ಹಾಗೂ ಬಹುರೂಪೀ ಮುಖಗಳು ಇತಿಹಾಸದ ಬೆಳವಣಿಗೆಯ ಗತಿಯನ್ನು ನಿರ್ಧರಿಸುವಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತವೆ. ನಗರಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಅವು ವಾಸಕೋಸ್ಕರ ಜನಸಂದಣಿಯು ಹಂಚಿಕೆ-ಮಾಡಿಕೊಂಡಿರುವ ತಾಣ ಮಾತ್ರವೇ ಆಗಿಲ್ಲ ಎಂಬುದು ವೇದ್ಯವಾಗುತ್ತದೆ.

ಇದನ್ನು ಹಲವು ರೀತಿಯಲ್ಲಿ ವ್ಯಾಖ್ಯಾನಿಸಲು, ಅಧ್ಯಯನ ಮಾಡಲು ದಾರಿಗಳಿವೆ. ಅವುಗಳ ಒಂದು ಮಗ್ಗುಲನ್ನು ಈಗ ನೋಡೋಣ.

ಇತಿಹಾಸದಲ್ಲಿ ನಗರಗಳ ಬಗ್ಗೆ ನಾವು ಅಧ್ಯಯನ ಮಾಡುವಾಗ ನಗರೀಕರಣ, ನಗರತ್ವ, ಔದ್ಯೋಗೀಕರಣ, ನಗರ ಸಮಾಜ, ನಗರ ಸಂಸ್ಕೃತಿ, ನಗರಾಡಳಿತ, ನಗರ ಯೋಜನೆ, ಕಾರ್ಮಿಕ ಸಮಸ್ಯೆಗಳು ಮುಂತಾದ ಅನೇಕ ವಿಷಯಗಳ ಬಗ್ಗೆ ಚರ್ಚಿಸಬೇಕಾಗುತ್ತದಷ್ಟೆ. ವಿಶ್ವವಿದ್ಯಾನಿಲಯಗಳು, ನಗರ ಯೋಜನಾ ಪ್ರಾಧಿಕಾರಗಳು ನಗರಗಳ ಬಗ್ಗೆ ಸಂಶೋಧನಾತ್ಮಕ ಸಮೀಕ್ಷೆಗಳನ್ನು ಕೈಗೊಂಡು ನಗರಗಳ ಸಮಸ್ಯೆಗಳನ್ನು ಪರಿಹರಿಸದಿದ್ದರೆ ಶಾಂತಿ, ಸುಭದ್ರತೆ, ನಿಶ್ಚಿತತೆಯ ಅನಿಸಿಕೆ, ಸುವ್ಯವಸ್ಥೆ, ನೆಲೆಗೊಳ್ಳಲಾರದು! ನಗರಗಳಲ್ಲಿ ಸಂಘಟನೆ, ವಿಘಟನೆ, ಸಂಘರ್ಷ ಮತ್ತು ಹೊಂದಾಣಿಕೆಗಳು ಸರ್ವೇಸಾಮಾನ್ಯವಾಗಿದ್ದರೂ ಇವು ನಗರಗಳ ಸ್ವರೂಪವನ್ನೇ ಬದಲಾಯಿಸಬಲ್ಲವು. ನಗರಗಳು ನಿತ್ಯ ಪರಿವರ್ತನೆಗೆ ಒಳಗಾಗುವುದರಿಂದ ನಗರಜೀವನದಲ್ಲಿ ಮಹತ್ತರವಾದ ಬದಲಾವಣೆಗಳು ಕಾಣಿಸಿಕೊಳ್ಳುತ್ತವೆ. ಆದರೆ, ನಗರಗಳನ್ನು ತನ್ನ ಪಾಡಿಗೆ ತಾನು ಬೆಳೆಯಲು ಬಿಟ್ಟರೆ ಅದು ಅಸ್ತವ್ಯಸ್ತ ರೀತಿಯಲ್ಲಿ ಬೆಳೆಯಬಹುದು ಇದಕ್ಕೆ ಬಹಳ ದೂರದ ಉದಾಹರಣೆಯನ್ನು ಹೇಳಬೇಕಾಗಿಲ್ಲ. ಭಾರತದ ಮುಂಬಯಿ, ಕಲ್ಕತ್ತ, ದೆಹಲಿಗಳು; ಅಮೆರಿಕಾದ ಸ್ಯಾನ್‌ಫ್ರಾನ್ಸಿಸ್ಕೋ, ರಷ್ಯದ ಲೆನಿನ್‌ಗ್ರಾಡ್ ಇಂಥವೇ ಹಲವಾರು ನಗರಗಳು ಉದಾಹರಣೆಗಳಾಗಿ ನಮ್ಮ ಮುಂದಿವೆ. ನಗರಗಳನ್ನು ಅಪೇಕ್ಷಿತ ರೀತಿಯಲ್ಲಿ ಯೋಜನಾಬದ್ಧವಾಗಿ ನಿಯತ್ರಿಸುವ ಅವಶ್ಯಕತೆ ಇದೆ. ನಗರದ ದೀರ್ಘಕಾಲೀನ ಬೆಳವಣಿಗೆಯನ್ನು ಗಮನದಲ್ಲಿರಿಸಿಕೊಂಡು ದೂರದೃಷ್ಟಿಯ ಆಲೋಚನೆಯಿಂದ ಕೂಡಿದ ಯೋಜನೆಗಳನ್ನು ರೂಪಿಸಬೇಕಾಗುತ್ತದೆ. ಈ ಹೊತ್ತು ಇದು ಅನಿವಾರ್ಯ ಮಾತ್ರವಲ್ಲ ಅಗತ್ಯಕೂಡಾ.

ನಗರ ಜೀವನದ ಭಿನ್ನತೆಗಳು

ನಗರ ಜೀವನದ ಗುಣವಿಶೇಷಗಳು ಜಗತ್ತಿನ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಭಿನ್ನವಾಗುವುದು ಉಂಟು. ಒಂದೇ ಪ್ರದೇಶದಲ್ಲಿರುವ ನಗರಗಳಲ್ಲಿಯೂ ಭಿನ್ನತೆಗಳು ಇರುವುದು ಕಂಡು ಬರುತ್ತವೆ. ಈ ಭಿನ್ನತೆಗಳು ಸಾಂಸ್ಕೃತಿಕ ವ್ಯತ್ಯಾಸಗಳಾಗಿದ್ದರೆ ಅವುಗಳು ಅಪೇಕ್ಷಿತ ವೈವಿಧ್ಯಗಳಾಗುತ್ತವೆ. ತಂತ್ರಜ್ಞಾನ, ಆರ್ಥಿಕ, ಸಂಘಟನೆ ಮತ್ತು ಆಡಳಿತ ವಿಷಯಗಳಲ್ಲಿ ಕೂಡಾ ನಗರತ್ವವು ಜಾಗತಿಕ ಸಾದೃಶ್ಯಗಳ ನಿಟ್ಟಿನಲ್ಲಿ ಮುಂದುವರೆಯುತ್ತಿದ್ದು ಇಂತಹ ಸಾದೃಶ್ಯಗಳು ಜೀವನ ಮಟ್ಟಗಳನ್ನು ಎತ್ತರಿಸುವಲ್ಲಿ ನೆರವಾಗುತ್ತಿವೆ. ಇಷ್ಟಲ್ಲದೆ, ವಿಭಿನ್ನ ನಗರ ಪ್ರದೇಶಗಳ ಸಾಂಸ್ಕೃತಿಕ ಹೆಚ್ಚುಗಾರಿಕೆ ಅಥವಾ ವೈಶಿಷ್ಟ್ಯ, ವೈವಿಧ್ಯತೆಗಳಿಗೆ ಮಾರಕಪ್ರಾಯವಾಗುವುದಿಲ್ಲ. ಆದಕಾರಣ ಇಂತಹ ಬೆಳವಣಿಗೆಯು ಅಪೇಕ್ಷಿತವೂ, ಸ್ವಾಗತಾರ್ಹವೂ ಆಗಿದೆ. ಮಾನವ

ಸ್ಥಿತಿಗತಿಗಳಿಗೆ ಸಂಬಂಧಿಸಿದಂತೆ ಜಗತ್ತನ್ನು ಅಖಂಡಗೊಳಿಸುವಲ್ಲಿ ಜಾಗತಿಕ-ಸ್ವರೂಪದ ನಗರತ್ವ ನೆರವಾಗಿದೆ. ಜಾಗತಿಕ ನಗರೀಕರಣದ ಒಟ್ಟು ಸ್ವರೂಪ ಅಂದರೆ, ನಗರ ಯೋಜನೆ, ನಗರ ಸಿದ್ಧಾಂತ, ನಗರ ಆಡಳಿತ, ನಗರ ಸಂಪನ್ಮೂಲ, ನಗರ ಸಂಬಂಧ, ನಗರ ಬೆಳವಣಿಗೆಯ ಹಂತಗಳೇ. ಇಂದು ಇವೆಲ್ಲಾ ಮೂಲಭೂತ ಪ್ರಾಮುಖ್ಯವುಳ್ಳವಾಗಿವೆ. ಇವು ದೇಶದಿಂದ ದೇಶಕ್ಕೆ ಬೇರೆ ಬೇರೆಯಾಗಿದ್ದರೂ ನಗರೀಕರಣದ ಮೂಲಸ್ವರೂಪದಲ್ಲಿ ಹೊಂದಾಣಿಕೆ ಇರುವುದನ್ನು ನಾವು ಕಾಣಬಹುದು.

ಸಾಂಪ್ರದಾಯಕ ಪಟ್ಟಣಗಳು ಗ್ರಾಮೀಣ ಪ್ರದೇಶದ ಲಕ್ಷಣಗಳನ್ನು ಹೊಂದಿರುತ್ತವೆ. ಭಾರತದ ನಗರೀಕರಣದ ಸಂದರ್ಭದಲ್ಲಿ ಈ ಅಂಶವನ್ನು ಗಮನಿಸಬಹುದು. ಗ್ರಾಮೀಣ ಪ್ರದೇಶ ಹಾಗೂ ಸಾಂಪ್ರದಾಯಕ-ಪಟ್ಟಣಗಳ ಸಾಮ್ಯತೆಯನ್ನು ಸರಳೀಕರಣಗೊಳಿಸುವ ಪ್ರಯತ್ನವೂ ಇಂದು ಅಧ್ಯಯನದಲ್ಲಿ ನಡೆದಿದೆ. ಆಧುನಿಕ ನಗರೀಕರಣದ ಪ್ರಭಾವ ಸಾಂಪ್ರದಾಯಕ ನಗರೀಕರಣದ ಮೇಲೆ ಆದಾಗ ಅದು ಕೆಲವೊಂದು ಎಡವಟ್ಟುಗಳಿಗೆ ಕಾರಣವಾಗುತ್ತದೆ ಮತ್ತು ಹೊಸತನವನ್ನು ಪ್ರತಿಬಿಂಬಿಸುತ್ತದೆ. ಎರಡೂ ಬಗೆಯ ಕಾರಣಗಳಿಗೂ ಅವಕಾಶಗಳಿವೆ. ಇಲ್ಲಿ ನಾವು ಸಾಂಪ್ರದಾಯಕ ನಗರಗಳಲ್ಲಿನ ದ್ವಂದ್ವವನ್ನು ಕಾಣಬಹುದು. ಈ ರೀತಿಯ ಬದಲಾವಣೆಯಾದಾಗ ನಗರೀಕರಣವು ಹೊಸ ನಗರದ ರಚನೆಗೂ ವ್ಯವಸ್ಥೆಗೂ ಕಾರಣವಾಗುತ್ತದೆ. ಸಾಂಪ್ರದಾಯಕ ಪಟ್ಟಣಗಳಿಗೆ ಆಧುನಿಕತೆಯ ಸೋಂಕು ತಗಲಿದಾಗ ಉಂಟಾಗುವ ಮಾರ್ಪಾಡುಗಳು, ಅವುಗಳ ಅವನತಿಗೆ ಕಾರಣವಾಗುವುದಿಲ್ಲ. ಇದನ್ನು ನಾವು ಮೊದಲು ತಿಳಿಯಬೇಕು. ಆದರೆ, ಇಲ್ಲಿ ಅವನತಿಯನ್ನು ಕಾಣುವುದು ಸಾಂಪ್ರದಾಯಕ ಎನ್ನುವ ವ್ಯವಸ್ಥೆ ಮಾತ್ರ. ಆದರೂ ಹಲವು ನಗರಗಳ ಮೂಲಭಾಗಗಳಲ್ಲಿ ಕೆಲವು ಹೊಂದಾಣಿಕೆ, ಅಳವಡಿಕೆಗಳೊಂದಿಗೆ ಸಾಂಪ್ರದಾಯಕ ಜೀವನ ವಿಧಾನವೇ ನಡೆಯುತ್ತಿದೆ.

ಹಂತಗಳು

ನಗರೀಕರಣ ಒಂದು ನಿರಂತರ ಪ್ರಕ್ರಿಯೆಯಷ್ಟೆ. ಪೇಟೆ-ಪಟ್ಟಣಗಳು ಒಮ್ಮಿಂದೊಮ್ಮೆಗೆ ಅಸ್ತಿತ್ವಕ್ಕೆ ಬಂದಿಲ್ಲ. ಪ್ರತಿಯೊಂದು ನಗರ ಕೇಂದ್ರವೂ ತನ್ನದೇ ಆದ ಇತಿಹಾಸವನ್ನು ಹೊಂದಿದೆ. ಈ ಇತಿಹಾಸವನ್ನು ಅವಲೋಕಿಸಿದಾಗ ನಗರೀಕರಣದ ವಿವಿಧ ಹಂತಗಳು ಗೋಚರಿಸುತ್ತವೆ. ಇತಿಹಾಸದುದ್ದಕ್ಕೂ ಮಾನವ ಬೇರೆ ಬೇರೆ ಬೇರ್ಪಟ್ಟ ಗುಂಪುಗಳಾಗಿ ಜೀವಿಸುತ್ತಿದ್ದ. ಆದರೆ ಕೆಲವು ನೂರು ವರ್ಷಗಳಿಂದೀಚೆಗೆ ನಗರೀಕರಣ ಪ್ರಕ್ರಿಯೆ ಅನೇಕ ಗುಂಪುಗಳನ್ನು ರೂಪಾಂತರಗೊಳಿಸುವಲ್ಲಿಯಶಸ್ವಿಯಾಗಿವೆ ಮತ್ತು ಸಮಾಜದ ಬೆಳವಣಿಗೆಯ ಗತಿಯನ್ನು ಬದಲಾಯಿಸುವ ಪ್ರಬಲ ಶಕ್ತಿಯಾಗಿ ರೂಪುಗೊಂಡಿದೆ. ಇಂದು ಜನಸಂಖ್ಯೆಯ ಶೇಕಡಾವಾರು ಅಂಕಿ ಅಂಶಗಳನ್ನು ಗಮನಿಸಿದಾಗ ಹೆಚ್ಚಿನ ಜನರು ನಗರಕೇಂದ್ರಗಳಲ್ಲಿಯೇ ಜೀವಿಸುತ್ತಿದ್ದಾರೆ. ನಗರಗಳ ಸಮಗ್ರ ಅಧ್ಯಯನ

ನಡೆಸುವಾಗ ಮುಖ್ಯವಾಗಿ ನಮ್ಮ ಗಮನ ಸೆಳೆಯುವ ಅಂಶವೆಂದರೆ ಕೈಗಾರಿಕಾ ಕ್ರಾಂತಿ. ಕೈಗಾರಿಕೀಕರಣವನ್ನೇ ಕೇಂದ್ರ ಬಿಂದುವನ್ನಾಗಿ ಇಟ್ಟುಕೊಂಡು ನಗರಗಳ ಬಗ್ಗೆ ಅಭ್ಯಸಿಸುವಾಗ ವಿವಿಧ ಮಜಲುಗಳನ್ನು ಗುರುತಿಸಲು ಸಾಧ್ಯ. ಅವುಗಳೆಂದರೆ ಕೈಗಾರಿಕಾಪೂರ್ವ ನಗರಗಳು, ಕೈಗಾರಿಕಾ ನಗರಗಳು ಮತ್ತು ಮೆಗಾಸಿಟಿಗಳು. ಈ ಬಗೆಯ ಅಧ್ಯಯನಗಳು ಜಾಗತಿಕ ನೆಲೆಯಲ್ಲಿ ಇಂದು ನಡೆಯುತ್ತಿವೆ.

ಕೈಗಾರಿಕಾ ಪೂರ್ವ ನಗರಗಳು

ಅಲೆಮಾರಿ ಜೀವನವನ್ನು ನಡೆಸುತ್ತಿದ್ದ ಮಾನವ ಒಂದೇ ಕಡೆ ನೆಲೆ ನಿಂತು ಜೀವಿಸಲು ತೊಡಗಿದಂದಿನಿಂದ ಪಟ್ಟಣಗಳ ಪ್ರಾಮುಖ್ಯತೆಯನ್ನು ಅರಿತುಕೊಂಡ. ಇದು ಸುಮಾರು ಹತ್ತು ಸಾವಿರ ವರ್ಷಗಳ ಹಿಂದಿನ ಮಾನವನ ಬದುಕನ್ನು ಅಧ್ಯಯನ ನಡೆಸುವಾಗ ಗೋಚರಿಸುವ ಅಂಶ. ಕ್ರಮೇಣ ತಂತ್ರಜ್ಞಾನದಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸಿ ತನ್ನದೇ ಆದ ಹಳ್ಳಿಗಳನ್ನು ನಿರ್ಮಿಸಿದ. ವ್ಯವಸಾಯದಲ್ಲಿ ಹೆಚ್ಚುವರಿ ಸಂಪತ್ತನ್ನು ಉತ್ಪಾದಿಸಿ ವ್ಯಾಪಾರಕ್ಕೆ ಎಡೆಮಾಡಿಕೊಟ್ಟ. ಇದರ ಫಲವೇ ಪೇಟೆ-ಪಟ್ಟಣಗಳ ಉಗಮಕ್ಕೆ ಕಾರಣವಾದುವು. ಪ್ರಾಚೀನ ಪಟ್ಟಣಗಳು ಮೊದಲು ನದಿದಂಡೆಯಲ್ಲೇ ಅಸ್ತಿತ್ವಕ್ಕೆ ಬಂದವು. ಉದಾಹರಣೆಗೆ, ಈಜಿಪ್ಟ್‌ನ ನೈಲ್, ಮಧ್ಯಪ್ರಾಶ್ಚ್ಯದ ಯುಫ್ರೆಟಿಸ್ ಮತ್ತು ಟೈಗ್ರಿಸ್, ಪಾಕಿಸ್ಥಾನದ ಸಿಂಧೂನದಿ, ಚೀಣಾದ ಹಳದಿ ನದಿ ಇತ್ಯಾದಿ. ಕೈಗಾರಿಕಾ ಪೂರ್ವ ಪಟ್ಟಣಗಳು ತುಂಬಾ ಚಿಕ್ಕ ಪಟ್ಟಣಗಳಾಗಿದ್ದುವು. ಜನಸಂಖ್ಯೆ ಐದು ಸಾವಿರದಿಂದ ಹತ್ತುಸಾವಿರದೊಳಗೆ ಇರುತ್ತಿತ್ತು. ಕೆಲವೇ ಪಟ್ಟಣಗಳು ಒಂದು ಲಕ್ಷ ಜನಸಂಖ್ಯೆಯನ್ನು ಹೊಂದಿದ್ದವು. ಕಿಂಗ್‌ಸ್ಲೀ ಡೇವಿಸ್‌ರವರ ಪ್ರಕಾರ ಕೈಗಾರಿಕಾ ಪೂರ್ವ ಪಟ್ಟಣಗಳಲ್ಲಿ ಸಾಂಪ್ರದಾಯಕ ರೀತಿಯ ಜೀವನವೇ ನಡೆಯುತ್ತಿತ್ತು. ವಸ್ತುಗಳನ್ನು ಸಾಗಿಸಲು ಮಾನವ ತನ್ನ ಸ್ವಂತ ಶ್ರಮ ಅಥವಾ ಪ್ರಾಣಿಗಳನ್ನು ಅವಲಂಬಿಸುತ್ತಿದ್ದ. ಗ್ರಾಮ ಹಾಗೂ ಪಟ್ಟಣಗಳಲ್ಲಿ ಹೆಚ್ಚಿನ ವ್ಯತ್ಯಾಸವನ್ನು ಕಾಣಲು ಸಾಧ್ಯವಾಗುತ್ತಿರಲಿಲ್ಲ. ಜನರು ಗ್ರಾಮಜೀವನವನ್ನೇ ಹೆಚ್ಚು ಇಷ್ಟಪಡುತ್ತಿದ್ದರು.

ಕೈಗಾರಿಕಾ ನಗರಗಳು

ಕೈಗಾರಿಕಾ ಕ್ರಾಂತಿಯಿಂದಾಗಿ ಪಟ್ಟಣಗಳು ತಮ್ಮ ಸ್ವರೂಪದಲ್ಲಿ ಸಂಪೂರ್ಣವಾಗಿ ಬದಲಾವಣೆಯನ್ನು ಕಂಡುಕೊಂಡವು. ಯಂತ್ರಗಳ ಆವಿಷ್ಕಾರ, ಬಹತ್ ನಗರಕೇಂದ್ರಗಳ ಉಗಮಕ್ಕೆ ನಾಂದಿಯಾಯಿತು. ಕೈಗಾರಿಕಾಪೂರ್ವ ಪಟ್ಟಣಗಳಿಗೆ ಹೋಲಿಸಿದರೆ ಕೈಗಾರಿಕಾ ಪಟ್ಟಣಗಳು ಹೆಚ್ಚು ವಿಸ್ತಾರವಾಗಿದ್ದು ದಟ್ಟವಾದ ಜನಸಂದಣಿಯನ್ನು ಹೊಂದಿವೆ. ಇಲ್ಲಿ ನಾನಾ ವಿಧದ ಚಿತ್ರವಿಚಿತ್ರ ರೀತಿಯ ಜೀವನಕ್ರಮ ನಡೆಯುತ್ತಿವೆ. ಬೇರೆ ಬೇರೆ ಜಾತಿ, ಮತ, ಪಂಥಕ್ಕೆ ಸೇರಿದ ಜನರು ಒಂದೇ ಕಡೆ ಸೇರಿ ವ್ಯಾಪಾರ ಚಟುವಟಿಕೆ ನಡೆಸುತ್ತಿರುವ ನರಕುಲ ಸಂಬಂಧವಾದ ವಸ್ತುಸಂಗ್ರಹಾಲಯಗಳಾಗಿವೆ. ಕೈಗಾರಿಕೀಕರಣದಿಂದಾಗಿ ಹೆಚ್ಚೆಚ್ಚು

ಜನರು ಹಳ್ಳಿಯಿಂದ ಪಟ್ಟಣಕ್ಕೆ ವಲಸೆ ಬಂದು ಜನಸಂಖ್ಯೆಯಲ್ಲಾದ ವಿಪರೀತ ಹೆಚ್ಚಳವನ್ನು ನಾವು ಕಾಣುತ್ತಿದ್ದೇವೆ. ಉತ್ಪಾದನಾ ಶಕ್ತಿಯ ಅಗಾಧ ಬೆಳವಣಿಗೆಯಿಂದಾಗಿ ಜನರ ಜೀವನಕ್ರಮ ಸಂಕೀರ್ಣವಾಗಿದೆ. ಬಂಡವಾಳಶಾಹಿ ಉತ್ಪಾದನಾ ಪದ್ಧತಿ ಪ್ರಾರಂಭವಾಗಿ ಸಮಾಜದ ಹಿತ ಅವಗಣನೆಗೆ ಒಳಗಾಗಿದೆ. ಆದರೆ, ಇದಕ್ಕೆ ಪ್ರತಿಕ್ರಿಯೆಯಾಗಿ ಸಮಾಜವಾದೀ ಚಿಂತನೆಗಳು ರೂಪುಗೊಂಡಿವೆ. ಕಾರ್ಮಿಕ ಸಂಘಟನೆಗಳು ರಚನೆಗೊಂಡು ಶೋಷಣೆಯ ವಿರುದ್ಧ ಧ್ವನಿ ಎತ್ತುವ ಪ್ರಕ್ರಿಯೆ ಚುರುಕುಗೊಳ್ಳಲಾರಂಭಿಸಿದೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಾದ ಆಫ್ರಿಕಾ, ಏಷ್ಯಾ ಮತ್ತು ಲ್ಯಾಟಿನ್ ಅಮೇರಿಕಾಗಳಲ್ಲಿ ನಗರೀಕರಣ ಹೆಚ್ಚು ನಾಟಕೀಯ ರೀತಿಯದ್ದಾಗಿದೆ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗಿಂತ ಹೆಚ್ಚಿನ ಜನಸಂಖ್ಯೆ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ನಗರಗಳಲ್ಲಿ ದಾಖಲಾಗಿದೆ. ಇದನ್ನು ಪ್ರಗತಿ ಎಂಬುದಾಗಿ ಪರಿಗಣಿಸಲು ಸಾಧ್ಯವಿಲ್ಲ. ಇದು ಕೇವಲ ಅಕಾಲ ಅಥವಾ ಅವಸರದ ನಗರೀಕರಣವಾಗಿದೆ. ಈ ಬಗ್ಗೆ ಅಧ್ಯಯನಗಳು ಇನ್ನೂ ವ್ಯಾಪಕವಾಗಿ ನಡೆಯಬೇಕಾಗಿದೆ.

ಮೆಗಾಸಿಟಿಗಳು

ನಗರಗಳು ವಿಸ್ತಾರವಾಗಿ ಬೆಳೆದಂತೆ ನಗರಗಳ ಹೊರವಲಯಗಳಲ್ಲಿ ಉಪನಗರಗಳು ರಚನೆಗೊಳ್ಳಲಾರಂಭಿಸಿವೆ. ಇವು ಮುಖ್ಯ ನಗರಕೇಂದ್ರದೊಡನೆ ಹೊಂದಿಕೊಂಡು ಇರುವುದಿಲ್ಲವಾದರೂ ಸಂಪರ್ಕ ಇಟ್ಟುಕೊಂಡಿವೆ. ಈ ಉಪನಗರಗಳು ವಿಸ್ತಾರವಾಗಿ ಬೆಳೆದ ನಂತರ ಮುಖ್ಯ ನಗರದೊಡನೆ ವಿಲೀನಗೊಂಡು ಮೆಗಾಸಿಟಿಗಳಾಗಿವೆ. ಈ ಸಂಕೀರ್ಣ ಹಂತದಲ್ಲಿ ಗ್ರಾಮ, ಉಪನಗರ ಮತ್ತು ಮುಖ್ಯ ನಗರಕೇಂದ್ರಗಳ ಅಂತರ ಮಾಯವಾಗಿದೆ. ಮಾರ್ಕ್ಸ್‌ವಾದಿ ಚಿಂತಕರ ಪ್ರಕಾರ ಉಪನಗರಗಳು ರಚನೆಗೊಳ್ಳಲು ಮುಖ್ಯಕಾರಣ ಬಂಡವಾಳಶಾಹಿ ಧೋರಣೆಯೇ ಆಗಿದೆ. ಮುಖ್ಯ ನಗರ ಕೇಂದ್ರಗಳಲ್ಲಿ ಬೇರೂರಿದ್ದ ಕಾರ್ಮಿಕರ ಅಸಮಾಧಾನವನ್ನು ತಡೆಗಟ್ಟಲು ಮತ್ತು ಹೆಚ್ಚಿನ ತೆರಿಗೆ ಹಾಗೂ ಆರ್ಥಿಕ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯಲು ನಗರಗಳ ಹೊರವಲಯಗಳಲ್ಲಿ ಕಾರ್ಖಾನೆಗಳನ್ನು ನಿರ್ಮಿಸುವುದು ಅನಿವಾರ್ಯವಾಗಿರುವುದನ್ನು ಕಾಣುತ್ತಿದ್ದೇವೆ. ಬಂಡವಾಳ ಶೇಖರಣೆ ಏಕಮಾತ್ರ ಗುರಿಯಾಗಿದ್ದಾಗ ಮತ್ತು ಅದೇ ಇಡೀ ಆರ್ಥಿಕತೆಯ ಹಿಂದಿನ ಚಾಲಕಶಕ್ತಿಯೂ ಆಗಿರುವಾಗ ನಗರಗಳ ಹೊರವಲಯಗಳಲ್ಲಿ ಉಪನಗರಗಳ ಸೃಷ್ಟಿಗೆ ಬಂಡವಾಳಶಾಹಿ ಧೋರಣೆ ಕಾರಣವಾಗುವುದು ಸಹಜವೆನಿಸುತ್ತದೆ. ಮೆಗಾಸಿಟಿಗಳು ಸಮಗ್ರ ಜನಜೀವನಮಟ್ಟದ ಉನ್ನತಿಯೆಂದು ಪರಿಗಣಿಸುವಾಗಲೇ ಅದರಿಂದ ಉಂಟಾಗುವ ಭೀಕರ ಸಮಸ್ಯೆಗಳ ಅರಿವೂ ಜಾಗೃತವಾಗುತ್ತದೆ. ನಿರ್ದಿಷ್ಟ ಪ್ರದೇಶಗಳು ನಿರ್ದಿಷ್ಟ ಉದ್ದೇಶಕ್ಕೆ ಮಾತ್ರ ಎಂಬ ಖಚಿತ ನಿರ್ಧಾರ ಇಲ್ಲದಿರುವುದೇ ಮೆಗಾಸಿಟಿಗಳ ವ್ಯವಸ್ಥಿತ ಅಭಿವೃದ್ಧಿಗೆ ತೊಡಕಾಗಿರುವ ಅಂಶ. ಈ ಅಂಶವನ್ನೂ ಹಲವು ಮಗ್ಗುಲುಗಳಲ್ಲಿ ಅಧ್ಯಯನ ಮಾಡಲು ಇನ್ನೂ ಅವಕಾಶಗಳಿವೆ.

ನಗರತ್ವ (Urbanism)

ನಗರಗಳ ಬೆಳವಣಿಗೆಯು ಒಂದು ಸಂಕೀರ್ಣ ಪ್ರಕ್ರಿಯೆ ಎಂದು ಈ ಹಿಂದೆ ಹೇಳಿದೆ. ಒಂದು ಸಮಾಜ ನಾಗರೀಕ ಜೀವನ ಕ್ರಮದತ್ತ ಪ್ರಗತಿ ಹೊಂದುವ ಸಂಕೇತ ಇದು. ಯಾವುದೇ ಸರಳ ಮತ್ತು ಬೇರ್ಪಟ್ಟ ವ್ಯಾಖ್ಯಾನಗಳಿಂದ ನಗರಗಳ ಬೆಳವಣಿಗೆಯನ್ನು ವಿಶ್ಲೇಷಿಸುವುದು ಕಷ್ಟಸಾಧ್ಯ. ಹಳ್ಳಿಗಾಡಿನ ಜನಜೀವನದ ರೀತಿ ನೀತಿಗಳ ಮೇಲಣ ನಗರದ ಜೀವನ ಕ್ರಮದ ಪರಿಣಾಮ ಪ್ರಭಾವ ಮತ್ತು ಬದಲಾವಣೆಗಳನ್ನು ನಗರೀಕರಣ ಪದ ಸೂಚಿಸುತ್ತದೆ. ಗ್ರಾಮೀಣ ಪ್ರದೇಶ ಪಟ್ಟಣವಾಗಿ ಪರಿವರ್ತನೆಗೊಳ್ಳುವ ಪ್ರಕ್ರಿಯೆಯನ್ನು ನಗರೀಕರಣವೆಂದು ಕರೆಯಬಹುದು. ಈ ಪ್ರಕ್ರಿಯೆಯಿಂದಾಗಿ ನಗರತ್ವ ರೂಪುಗೊಳ್ಳುತ್ತದೆ. ನಗರದ ಜೀವನ ಕ್ರಮವನ್ನು ನಾವು ಸದ್ಯಕ್ಕೆ ನಗರತ್ವ ಎಂಬ ನೆಲೆಯಲ್ಲಿ ವ್ಯಾಖ್ಯಾನಿಸ ಬಹುದು. ಇದೊಂದು ವಿಶೇಷ ಪರಿಕಲ್ಪನೆಯಾಗಿದ್ದು ನಗರಜೀವನ ಮಾದರಿಯನ್ನು ಸಂಕೇತಿಸುತ್ತದೆ. ನಗರ ಜೀವನದ ವೈವಿಧ್ಯತೆ, ವಿಭಿನ್ನತೆ, ನಗರವಾಸಿಗಳ ಪರಸ್ಪರ ಅವಲಂಬನೆಯಲ್ಲಿಯ ಹೆಚ್ಚಳ, ವೈಚಾರಿಕ ಪ್ರಧಾನ ಜೀವನ, ಸಾಮಾಜಿಕ ಸಂಬಂಧಗಳಲ್ಲಿಯ ಪ್ರತ್ಯೇಕತೆ ಮೊದಲಾದ ನಗರ ಜೀವನ ಶೈಲಿಯ ಪ್ರಧಾನ ಗುಣ ವಿಶೇಷಗಳನ್ನು ನಗರತ್ವ ಪರಿಕಲ್ಪನೆಯು ಒಳಗೊಳ್ಳುತ್ತದೆ. ನಗರೀಕರಣವು ಒಂದು ನಿರಂತರ ಪ್ರಕ್ರಿಯೆಯಾಗಿದ್ದು ನಗರ ಬೆಳವಣಿಗೆಯ ಹೊರನೋಟದ ಮುಖಗಳನ್ನು ಸಂಕೇತಿಸಿದರೆ, ನಗರತ್ವವು ನಗರ ಬೆಳವಣಿಗೆಯ ಒಳನೋಟವನ್ನು ಸಂಕೇತಿಸುತ್ತದೆ.

ನಗರೀಕರಣವು ಪ್ರಪಂಚದ ಯಾವುದೇ ಭಾಗದಲ್ಲಿ ಆಗುತ್ತಿದ್ದರೂ ಅದು ಅಲ್ಲಿನ ಸಾಮಾಜಿಕ, ರಾಜಕೀಯ, ಆರ್ಥಿಕ, ಭೌಗೋಳಿಕ ಮತ್ತು ಧಾರ್ಮಿಕ ಅಂಶಗಳಿಂದ ಪ್ರೇರಣೆಗೊಂಡಿರುತ್ತದೆ. ಯಾವುದೇ ಒಂದು ಅಂಶ ಸ್ವತಂತ್ರವಾಗಿ ಒಂದು ಹಳ್ಳಿ ಪ್ರದೇಶ ನಗರ ಕೇಂದ್ರವಾಗಿ ಪರಿವರ್ತನೆಗೊಳ್ಳುವುದಕ್ಕೆ ಪೂರಕವಾಗಲಾರದು. ಗ್ರಾಮೀಣ ಪ್ರದೇಶಗಳಲ್ಲಿ ಕೃಷಿಕರು ಹೆಚ್ಚುವರಿ ಸಂಪತ್ತನ್ನು ಉತ್ಪಾದಿಸದಿದ್ದರೆ ಹೊಸ ರಾಜಕೀಯ ವ್ಯವಸ್ಥೆ ರೂಪುಗೊಳ್ಳುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಈ ರಾಜಕೀಯ ವ್ಯವಸ್ಥೆ ಹೆಚ್ಚುವರಿ ಸಂಪತ್ತು ನಗರ ಪ್ರದೇಶಗಳಿಗೆ ಸರಿಯಾದ ರೀತಿಯಲ್ಲಿ ಹರಿದು ಬರುವುದಕ್ಕೆ ಮತ್ತು ಅದರ ಹಂಚಿಕೆ, ಮರುಹಂಚಿಕೆಗೆ ಸಹಕಾರಿಯಾಗುತ್ತದೆ. ಇದು ಅಶಾಂತಿ ಮತ್ತು ಅರಾಜಕತೆ ತಲೆದೋರದಂತೆ ತಡೆಗಟ್ಟುತ್ತದೆ. ಇನ್ನೊಂದು ಆವಶ್ಯಕವಾದ ಅಂಶ ವ್ಯಾಪಾರಿ ವರ್ಗ. ಇವರು ವ್ಯಾಪಾರ ವಸ್ತುಗಳು ಒಂದು ಪ್ರದೇಶದಿಂದ ಇನ್ನೊಂದೆಡೆಗೆ ವರ್ಗಾವಣೆ ಹೊಂದುವುದಕ್ಕೆ ಮುಖ್ಯ ಕಾರಣರು. ಇದರಿಂದಾಗಿ ಆರ್ಥಿಕ ಸ್ಥಗಿತ ಉಂಟಾಗಲಾರದು. ಆದ್ದರಿಂದ ಈ ಮೂರು ಅಂಶಗಳು ನಗರಗಳ ಬೆಳವಣಿಗೆಯಲ್ಲಿ ಮಹತ್ತರವಾದ ಪಾತ್ರವನ್ನು ವಹಿಸುತ್ತವೆ. ನಗರಕೇಂದ್ರಗಳ ಉಗಮಕ್ಕೆ ಮತ್ತು ಅವುಗಳ ಪ್ರಗತಿಗೆ ಪೂರಕವಾದ ಮತ್ತು ಪ್ರಭಾವವನ್ನು ಬೀರಿದ ಕೆಲವೊಂದು ಅಂಶಗಳನ್ನು ಇಲ್ಲಿ ಚರ್ಚಿಸಬೇಕಾಗುತ್ತದೆ.

ವಿವಿಧ ಕಾರಣಗಳು

ಪ್ರಥಮವಾಗಿ, ಮೂಲಭೂತವಾದ ಅಂಶವೆಂದರೆ ಹೆಚ್ಚುವರಿ ಆಹಾರದ ಉತ್ಪಾದನೆ. ನಗರಕೇಂದ್ರಗಳು ಹುಟ್ಟಿಕೊಂಡದ್ದೇ ಕೃಷಿಕರು ಹೆಚ್ಚುವರಿ ಉತ್ಪಾದನೆ ಪ್ರಾರಂಭಿಸಿದಾಗಿನಿಂದ. ಈ ಹೆಚ್ಚುವರಿ ಉತ್ಪಾದನೆಯು ಜನರ ತಾಂತ್ರಿಕತೆಯನ್ನು ಅವಲಂಬಿಸಿಕೊಂಡಿದೆ. ಬ್ರೂಸ್ ಟ್ರಿಗರ್ ರವರ ಪ್ರಕಾರ ನಗರದಲ್ಲಿ ಜೀವಿಸುತ್ತಿರುವವರಲ್ಲಿ ಕೆಲವರು ತಾತ್ಕಾಲಿಕ ಅಥವಾ ಅರೆ-ಕಾಲಿಕ ನೆಲೆಯಲ್ಲಿ ನಗರಗಳ ಆಸುಪಾಸಿನ ಪರಿಸರದಲ್ಲಿ ಆಹಾರ ಉತ್ಪಾದನೆಯಲ್ಲಿ ತೊಡಗುತ್ತಿದ್ದರು. ಆದರೆ ಟ್ರಿಗರ್‌ರವರು ಅಭಿಪ್ರಾಯಪಡುವಂತೆ ಇದು ಸಂಪ್ರದಾಯ ನಗರಗಳಿಗೆ ಸಂಬಂಧಪಟ್ಟದ್ದು ಎನ್ನುವುದು ಮನವರಿಕೆಯಾಗುತ್ತದೆ. ನಗರಗಳು ಆಹಾರ ಉತ್ಪಾದನೆಯಲ್ಲಿ ತೊಡಗುತ್ತಿರಲಿಲ್ಲ, ಅವು ಕರಕುಶಲ, ಕೈಗಾರಿಕಾ ಮತ್ತು ವ್ಯಾಪಾರದಲ್ಲಿ ತೊಡಗುತ್ತಿದ್ದವು. ನಗರವಾಸಿಗಳು ಆಹಾರವನ್ನು ಹಳ್ಳಿಗರಿಂದ ಖರೀದಿಸುತ್ತಿದ್ದರು. ಅದಕ್ಕೆ ಬದಲಾಗಿ ಸಿದ್ಧಪಡಿಸಿದ ವಸ್ತುಗಳನ್ನು ಮತ್ತು ಉದ್ಯೋಗಾವಕಾಶವನ್ನು ಹಳ್ಳಿಗರಿಗೆ ಒದಗಿಸುತ್ತಿದ್ದರು. ಇದರಿಂದಾಗಿ ನಗರವಾಸಿಗಳಿಗೆ ಬೇಕಾದ ಆಹಾರ ಮತ್ತು ಕೃಷಿಕರಿಗೆ ಬೇಕಾದ ಉಪಕರಣಗಳು ಲಭ್ಯವಾಗುತ್ತಿದ್ದವು. ಈ ರೀತಿಯ ಆತ್ಮೀಯ ಮತ್ತು ನೇರ ಸಂಪರ್ಕ ಗ್ರಾಮ ಮತ್ತು ನಗರ ಜೀವನದ ಕೊಂಡಿಯನ್ನು ಬಲಪಡಿಸುತ್ತದೆ. ಇದು ಒಂದು ಮುಖವಾದರೆ, ಇದರ ಇನ್ನೊಂದು ಮುಖವನ್ನೂ ನಾವು ಕಾಣಬಹುದು. ಚೀಣಾದೇಶದ ಇತಿಹಾಸವನ್ನು ನೋಡಿದಾಗ ಅಲ್ಲಿನ ಸಾಂಪ್ರದಾಯಕ ನಗರ ಕೇಂದ್ರಗಳು ತಮ್ಮ ಬಲಪ್ರಯೋಗಿಸಿ ಗ್ರಾಮೀಣ ಪ್ರದೇಶದಿಂದ ಆಹಾರವನ್ನು ದೋಚುತ್ತಿದ್ದರು ಮತ್ತು ಹಳ್ಳಿಗರನ್ನು ಶೋಷಿಸುತ್ತಿದ್ದರು, ಅತಿಯಾದ ತೆರಿಗೆಯ ರೂಪದಲ್ಲಿಯೂ ಆಹಾರವನ್ನು ಸಂಪಾದಿಸುತ್ತಿದ್ದರು. ಮುಖ್ಯವಾಗಿ ಇದರಲ್ಲಿ ಸರಕಾರಿ ಅಧಿಕಾರಿಗಳು, ಸೈನಿಕರು, ಜಮೀನ್ದಾರರು, ಶಾಮೀಲಾಗುತ್ತಿದ್ದರು.

ನಗರ ಕೇಂದ್ರಗಳ ಉಗಮಕ್ಕೆ ಭೌಗೋಳಿಕ ಸನ್ನಿವೇಶವೂ ಪ್ರಾಮುಖ್ಯವಾದ ಅಂಶವಾಗಿದೆ. ಇಲ್ಲಿ ಮುಖ್ಯವಾಗಿ ಪರಿಸರ, ಮಳೆ, ಭೂಮಿಯ ಫಲವತ್ತತೆ, ಸಾಗರ, ನದಿ, ನೈಸರ್ಗಿಕ ಸಂಪನ್ಮೂಲಗಳು, ಇವೆಲ್ಲಾ ನಗರ ಕೇಂದ್ರಗಳ ಅಸ್ತಿತ್ವವನ್ನು ನಿರ್ಧರಿಸುವ ಅಂಶಗಳಾಗಿವೆ. ಕೆಲವು ವ್ಯಾಪಾರಿ ಕೇಂದ್ರಗಳು ಮುಖ್ಯವಾದ ವ್ಯಾಪಾರ-ಪಥದಲ್ಲಿ ಇರುವುದರಿಂದ ಪ್ರಗತಿಯನ್ನು ಹೊಂದಿವೆ. ಕರಾವಳಿ ಪ್ರದೇಶದಲ್ಲಿ ಅನೇಕ ಪಟ್ಟಣಗಳು ಸಮುದ್ರ ಮಾರ್ಗ ಮೂಲಕ ತಮ್ಮ ವ್ಯಾಪಾರವನ್ನು ವೃದ್ಧಿಸಿಕೊಂಡವು. ನದಿಗಳ ಆಸುಪಾಸಿನ ಪರಿಸರಗಳಲ್ಲಿ ನಗರ ಕೇಂದ್ರಗಳು ಬೆಳೆದವು. ಇವೆಲ್ಲಾ ಆಯಾ ದೇಶದ ಭೌಗೋಳಿಕ ಪರಿಸ್ಥಿತಿಯನ್ನು ಅವಲಂಬಿಸಿದೆ.

ಆಡಳಿತಾತ್ಮಕ ಒತ್ತಡಗಳು ನಗರಗಳ ಬೆಳವಣಿಗೆಗೆ ಪೂರಕವಾದ ಅಂಶ. ನಗರಗಳು ವ್ಯವಸ್ಥಿತ ರೂಪದಲ್ಲಿ ರೂಪುಗೊಳ್ಳುವುದಕ್ಕೆ ಆಡಳಿತ ವರ್ಗದ ಆವಶ್ಯಕತೆ ಯಿದೆ, ನಗರ ಆಡಳಿತ, ನಗರಯೋಜನೆ ಮತ್ತು ನಗರ ಸಿದ್ಧಾಂತಗಳನ್ನು ಕ್ರಮಬದ್ಧವಾಗಿ

ಮತ್ತು ಶಿಸ್ತುಬದ್ಧವಾಗಿ ಅನುಷ್ಠಾನಕ್ಕೆ ತರಲು ಆಡಳಿತ ವ್ಯವಸ್ಥೆಯ ಅಗತ್ಯವಿದೆ. ಗ್ರಾಮೀಣ ಪ್ರದೇಶದಿಂದ ಹರಿದು ಬರುವ ಹೆಚ್ಚುವರಿ ಸಂಪತ್ತು ನಗರ ಪ್ರದೇಶದಲ್ಲಿ ವ್ಯವಸ್ಥಿತವಾಗಿ ಹಂಚಿಕೆಯಾದರೆ ಮಾತ್ರ ನಗರಗಳ ಸಮಗ್ರ ಬೆಳವಣಿಗೆ ಸಾಧ್ಯ. ಎಲ್ಲಾ ಅಧಿಕಾರ ವರ್ಗದ ವರೂ ನಗರಗಳಲ್ಲಿಯೇ ವಾಸ ಮಾಡುವುದರಿಂದ ಅರಾಜಕತೆಗೆ ಅವಕಾಶವಿರುವುದಿಲ್ಲ, ಪ್ರಾಚೀನ, ಮಧ್ಯಯುಗೀನ ಮತ್ತು ಆಧುನಿಕ ಇತಿಹಾಸದಲ್ಲಿ ನಾವು ಗಮನಿಸುವ ಮುಖ್ಯ ಅಂಶವೆಂದರೆ ಆಯಾ ಕಾಲದ ಅರಸರು ಮತ್ತು ಅಧಿಕಾರಿಗಳು ವಾಸಿಸುತ್ತಿದ್ದ ಪ್ರದೇಶಗಳೇ ನಗರಗಳಾಗಿ ಪರಿವರ್ತನೆಗೊಂಡವು ಹಾಗೂ ಬೆಳೆದವು. ಈ ನಗರಗಳ ಪ್ರಭಾವಕ್ಕೊಳಗಾಗಿ ಇನ್ನಿತರ ರಾಜಕೀಯ ಕೇಂದ್ರಗಳೂ ಶ್ರೀಮಂತ ನಗರ ಕೇಂದ್ರಗಳಾದವು. ಇದು ಚಾರಿತ್ರಿಕವಾಗಿ ನಮಗೆ ಎದ್ದು ಕಾಣುತ್ತದೆ.

ನಗರಗಳ ಬೆಳವಣಿಗೆಯ ಹಂತದಲ್ಲಿ ಜಮೀನ್ದಾರರ ಕೊಡುಗೆ ಅಪಾರವಾದದ್ದಾಗಿದೆ. ಜಮೀನ್ದಾರರು ಪದವೇ ಸೂಚಿಸುವಂತೆ ಜಮೀನಿಗೆ ಸಂಬಂಧಪಟ್ಟವರಾದರೂ ಹಳ್ಳಿ ಜೀವನವನ್ನು ಇಷ್ಟಪಡದೆ ನಗರಗಳ ಪ್ರಭಾವಕ್ಕೆ ಅವರು ಒಳಗಾದವರು. ಏಕೆಂದರೆ ಹಳ್ಳಿಯ ಕಷ್ಟಜೀವನದಿಂದ ನಗರ ಸುಖಜೀವನ ಸಹಜವಾಗಿಯೇ ಹೆಚ್ಚು ಆಕರ್ಷಣೀಯವಾದದ್ದು. ಗ್ರಾಮೀಣ ಆರ್ಥಿಕ ಪರಿಸ್ಥಿತಿಯಲ್ಲಿ ಹತೋಟಿಯನ್ನು ಸಾಧಿಸಿರುವ ಜಮೀನ್ದಾರ ನಗರದ ಆರ್ಥಿಕತೆಯಲ್ಲೂ ತಮ್ಮ ಮೇಲುಗೈಯನ್ನು ಸಾಧಿಸಿರುವುದು ಇತಿಹಾಸದಿಂದ ತಿಳಿದು ಬರುವ ಸತ್ಯ. ಹಳ್ಳಿಗಳಲ್ಲಿ ಈ ಭೂಮಾಲೀಕರ ಅಧೀನದಲ್ಲಿರುವವರು ಇವರ ಪರವಾಗಿ ಸಾಗುವಳಿ ಮಾಡಿ ಬಂದ ಹಣವನ್ನು ನಗರಗಳಲ್ಲಿ ವಾಸಿಸುತ್ತಿರುವ ತಮ್ಮ ಒಡೆಯರಿಗೆ ಕಳುಹಿಸುತ್ತಿದ್ದರು. ಈ ಗೈರು ಹಾಜರಾಗಿರುವ ಭೂ ಮಾಲೀಕರು ತಮ್ಮ ಜಮೀನಿನಿಂದ ಬಂದ ಹಣವನ್ನು ನಗರಗಳಲ್ಲಿ ವ್ಯಾಪಾರ ಮತ್ತು ಕೈಗಾರಿಕೆಗೆ ವಿನಿಯೋಗಿಸಿ ಅದ್ದೂರಿಯ ಜೀವನವನ್ನು ನಡೆಸುತ್ತಿದ್ದರು. ಈ ರೀತಿಯಾಗಿ ಗ್ರಾಮ ಮತ್ತು ನಗರವೆಂಬ ಎರಡೂ ವ್ಯವಸ್ಥೆಯಲ್ಲಿಯೂ ಭೂ ಮಾಲೀಕರು ನಿರ್ಣಾಯಕ ಪಾತ್ರವನ್ನು ವಹಿಸುತ್ತಿದ್ದರು.

ವ್ಯಾಪಾರ ಮತ್ತು ಮಾರುಕಟ್ಟೆಗಳು ನಗರಗಳ ಬೆಳವಣಿಗೆಯಲ್ಲಿ ನಿಶ್ಚಿತ ಪಾತ್ರವನ್ನು ವಹಿಸಿರುವುದು ಸ್ಪಷ್ಟ. ನಗರಗಳ ಪ್ರಗತಿಯನ್ನು ನಿರ್ಧರಿಸುವ ಅಂಶವಾಗಿ ವ್ಯಾಪಾರ ಮತ್ತು ಮಾರುಕಟ್ಟೆಗಳು ಕಾರ್ಯನಿರ್ವಹಿಸಿವೆ. ವ್ಯಾಪಾರವು ಗ್ರಾಮ ಮತ್ತು ನಗರವೆಂಬ ಎರಡು ಭಿನ್ನ ಉತ್ಪಾದನಾ ವ್ಯವಸ್ಥೆಯ ನಡುವಿನ ಕೊಂಡಿಯಾಗಿ ಕಾರ್ಯ ನಿರ್ವಹಿಸಲು ಪ್ರಾರಂಭಿಸಿದ್ದು ಚಾರಿತ್ರಿಕ ಸತ್ಯ. ಗ್ರಾಮ ಮತ್ತು ನಗರಗಳ ವ್ಯಾಪಾರದ ವ್ಯಾಪ್ತಿ ಕಿರಿದಾದದ್ದು. ಒಂದು ನಗರಕೇಂದ್ರದ ಹತ್ತಿರವಿರುವ ಗ್ರಾಮದೊಡನೆ ಮಾತ್ರ ವ್ಯಾಪಾರ ಸಂಬಂಧವನ್ನು ಹೊಂದಿರಲು ಸಾಧ್ಯ. ದೂರಪ್ರದೇಶದ ಆಂತರಿಕ ವ್ಯಾಪಾರದಲ್ಲಿ ಒಂದು ನಗರಕೇಂದ್ರ ಇನ್ನೊಂದು ನಗರಕೇಂದ್ರದೊಡನೆ ಮಾತ್ರ ವ್ಯಾಪಾರ ಸಂಬಂಧವನ್ನು ಹೊಂದಿರುವುದು ಸಹಜ. ದೂರ ಪ್ರದೇಶದ ಗ್ರಾಮದೊಡನೆ ನೇರವಾಗಿ ವ್ಯವಹರಿಸಲು ಸಾಧ್ಯವಾಗುವುದಿಲ್ಲ ಮತ್ತು ಹೆಚ್ಚಿನ ಭದ್ರತೆ ಮತ್ತು ರಕ್ಷಣೆಯ ಪ್ರಶ್ನೆಯೂ

ಉದ್ಭವಿಸುತ್ತದೆ. ವಿದೇಶೀ ವ್ಯಾಪಾರದಲ್ಲೂ ಇದೇ ತತ್ವವನ್ನು ಅನುಸರಿಸಬೇಕಾಗುತ್ತದೆ. ನಗರಗಳ ಬೆಳವಣಿಗೆಯ ಹಂತದಲ್ಲಿ ನಾವು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಒಂದು ಹೊಸ ಉಪ-ವ್ಯವಸ್ಥೆಯ ಇರುವಿಕೆಯನ್ನು ನಾವು ಕಾಣಬಹುದಾಗಿದೆ. ಕೆಲವು ಕಸುಬುದಾರರು ವ್ಯಾಪಾರೇತರ ವರ್ಗದವರ ಆಶ್ರಯದಲ್ಲಿ ಇದ್ದುಕೊಂಡು ವಸ್ತುಗಳನ್ನು ಉತ್ಪಾದಿಸುತ್ತಿದ್ದರು. ಹೀಗೆ ಉತ್ಪಾದನೆಗೊಂಡ ವಸ್ತುಗಳ ಉಸ್ತುವಾರಿಯನ್ನು ವ್ಯಾಪಾರೇತರ ವರ್ಗದವರೇ ನೋಡಿಕೊಳ್ಳುತ್ತಿದ್ದರು. ಈ ವರ್ಗವು ನಗರಗಳ ಬೆಳವಣಿಗೆಗೆ ತನ್ನದೇ ಆದ ಕೊಡುಗೆಯನ್ನು ನೀಡಿರುವುದನ್ನು ನಾವು ಗುರುತಿಸಬಹುದು.

ನಗರಗಳ ಹುಟ್ಟು ಮತ್ತು ಬೆಳವಣಿಗೆಯನ್ನು ಅಧ್ಯಯನ ಮಾಡುವಾಗ ಬೇರೆ ಬೇರೆ ರೀತಿಯ ನಗರ ಕೇಂದ್ರಗಳನ್ನು ಕಾಣುತ್ತೇವೆ. ನಗರ ಕೇಂದ್ರಗಳಲ್ಲಿ ಕೆಲವು ಆಡಳಿತ ಕೇಂದ್ರಗಳಾಗಿದ್ದುವು, ಕೆಲವು ವಾಣಿಜ್ಯ ಕೇಂದ್ರಗಳಾಗಿದ್ದುವು, ಕೆಲವು ಶೈಕ್ಷಣಿಕ ಕೇಂದ್ರಗಳಾಗಿದ್ದುವು, ಇನ್ನೂ ಕೆಲವು ಪ್ರಾಚೀನವೂ, ಪವಿತ್ರವೂ ಆದ ಧಾರ್ಮಿಕ ಕೇಂದ್ರಗಳಾಗಿದ್ದುವು. ಯಾವುದೋ ಒಂದು ಪ್ರಧಾನ ಲಕ್ಷಣವನ್ನು ಹೊಂದಿದ್ದರೂ ತಕ್ಕ ಪ್ರಮಾಣದಲ್ಲಿ ಮಿಕ್ಕ ಹಲವು ಹತ್ತುಕಾರ್ಯ ಚಟುವಟಿಕೆಗಳೂ ಅಲ್ಲಿ ನಡೆಯುತ್ತಿದ್ದವು. ಒಂದು ಆಡಳಿತ ಕೇಂದ್ರವು ವಾಣಿಜ್ಯ ಕೇಂದ್ರವೂ ಆಗಿರುತ್ತಿತ್ತು ಮತ್ತು ಶೈಕ್ಷಣಿಕ, ವೈದ್ಯಕೀಯ ಸೌಲಭ್ಯಗಳೂ ಅಲ್ಲಿರುತ್ತಿದ್ದುವು. ಫ್ರೆಂಚರು ಮತ್ತು ಪೋರ್ಚುಗೀಸರು ಭಾರತದಲ್ಲಿ ಹೆಚ್ಚು ನಗರಗಳನ್ನೇನೂ ನಿರ್ಮಿಸಲಿಲ್ಲ. ಆದರೆ ಅವರು ನಿರ್ಮಿಸಿದ ಕೆಲವು ನಗರಗಳು ಇಂದಿಗೂ ಉಳಿದು ಬಂದಿವೆ. ಅವು ಕೆಲವು ವಿಶೇಷ ಲಕ್ಷಣಗಳನ್ನು ಒಳಗೊಂಡಿವೆ. ಬಹು ದೀರ್ಘಕಾಲ ಇದ್ದುದರಿಂದಾಗಿ ಭಾರತ ದೇಶದ ನಗರೀಕರಣದ ಮೇಲೆ ಬ್ರಿಟೀಷರು ಹೆಚ್ಚಿನ ಪ್ರಭಾವವನ್ನು ಬೀರಿದ್ದಾರೆ. ಮುಂಬಯಿ, ಕಲ್ಕತ್ತಾ, ಮದರಾಸು ಈ ಮೂರು ಪ್ರೆಸಿಡೆನ್ಸಿ ನಗರಗಳ ಬೆಳವಣಿಗೆಗೆ ಅವರೇ ಮುಖ್ಯ ಕಾರಣರಾಗಿದ್ದಾರೆ. ಇನ್ನೂ ಹಲವು ನಗರಗಳು, ಕಂಟೋನ್ಮೆಂಟು, ಸಿವಿಲ್ ಲೈನುಗಳು ಬ್ರಿಟಿಷ್ ವಿನ್ಯಾಸದ ಮುದ್ರೆಗಳನ್ನು ಉಳಿಸಿಕೊಂಡಿವೆ. ಬ್ರಿಟಿಷ್ ಆಳ್ವಿಕೆಯ ಅವಧಿಯಲ್ಲಿ ಔದ್ಯೋಗೀಕರಣದ ಬೆಳವಣಿಗೆಗೆ ಚಾಲನೆ ದೊರೆತದ್ದರಿಂದಾಗಿ ಭಾರತದಲ್ಲಿ ಅನೇಕ ನಗರಗಳು ತೀವ್ರ ತರದಲ್ಲಿ ಬೆಳವಣಿಗೆ ಹೊಂದಿದವು.

ಯಂತ್ರಯುಗ ಆರಂಭವಾದ ನಂತರ ಬೃಹತ್ ಯಂತ್ರಗಳು ದೊಡ್ಡ ಪ್ರಮಾಣದಲ್ಲಿ ಅತ್ಯುತ್ತಮ ಮಟ್ಟದ ಸರಕುಗಳನ್ನು ಉತ್ಪಾದನೆ ಮಾಡಿ; ಅವುಗಳಲ್ಲಿ ಅತಿ ಕಡಿಮೆ ಬೆಲೆಯಲ್ಲಿ ಮಾರಾಟ ಮಾಡತೊಡಗಿದವು. ಇದು ಜಾಗತಿಕ ನಗರೀಕರಣದ ಮೈಲಿಗಲ್ಲು. ಕೈಗಾರಿಕಾ ಕ್ರಾಂತಿ ನಗರೀಕರಣ ಪ್ರಕ್ರಿಯೆಯಲ್ಲಿ ಕ್ರಾಂತಿಕಾರಿ ಬದಲಾವಣೆಯನ್ನುಂಟು ಮಾಡಿತು. ಕೈಗಾರಿಕಾ ಕ್ರಾಂತಿಯನ್ನೇ ಕೇಂದ್ರವನ್ನಾಗಿಟ್ಟುಕೊಂಡು ಕೈಗಾರಿಕಾ ಪೂರ್ವ ಹಾಗೂ ಕೈಗಾರಿಕೋತ್ತರ ನಗರಗಳೆಂದು ನಗರಗಳನ್ನು ವಿಂಗಡಿಸಬಹುದಾಗಿದೆ. ಕೈಗಾರಿಕಾ ಪೂರ್ವ ನಗರಗಳು ಊಳಿಗಮಾನ್ಯ ಪದ್ಧತಿಯ ಹಿಡಿತದಲ್ಲಿದ್ದವು ಎನ್ನುವುದು ಪ್ರಚಲಿತ ವಾದ. ನಗರಗಳ ಅವನತಿಗೆ ಊಳಿಗಮಾನ್ಯ ಪದ್ಧತಿಯೂ ಒಂದು ಮುಖ್ಯ ಕಾರಣ ಎಂದು

ಈಗ ಗುರುತಿಸಲಾಗಿದೆ. ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ನಗರೀಕರಣ ವ್ಯವಸ್ಥಿತವಾಗಿ ನಡೆಯಲು ಸಾಧ್ಯವಿಲ್ಲ. ಕೈಗಾರಿಕಾ ಕ್ರಾಂತಿಯ ನಂತರ ಈ ವ್ಯವಸ್ಥೆ ಬದಲಾಯಿತು. ಆದರೂ ಕೈಗಾರಿಕೆಯು ನಗರೀಕರಣದ ಮುಖ್ಯವಾಹಿನಿಯಲ್ಲಿ ಒಂದು ಅಂಶ ಮಾತ್ರ. ಹಾಗಾಗಿ, ಕೈಗಾರಿಕೀಕರಣ ಮತ್ತು ಊಳಿಗಮಾನ್ಯ ಪದ್ಧತಿ ಇವೆರಡೂ ಸಮಾನಾಂತರ ಪರಿಕಲ್ಪನೆಗಳಲ್ಲ ಎನ್ನುವುದನ್ನು ನಾವು ಗಮನದಲ್ಲಿ ಇರಿಸಿಕೊಳ್ಳಬೇಕಾಗುತ್ತದೆ. ಔದ್ಯೋಗೀಕರಣವಿಲ್ಲದೆ ನಗರೀಕರಣವು ಅಸ್ತಿತ್ವದಲ್ಲಿ ಇರಬಹುದಾಗಿದೆ. ಔದ್ಯೋಗೀಕರಣವು ಬೃಹತ್ ಪ್ರಮಾಣದಲ್ಲಿ ನಗರೀಕರಣಕ್ಕೆಡೆ ಮಾಡಿಕೊಟ್ಟರೂ, ನಗರೀಕರಣವು ಕೇವಲ ಔದ್ಯೋಗೀಕರಣಕ್ಕೆ ಮಾತ್ರ ಸೀಮಿತವಾಗಿಲ್ಲ. ಈ ತಾತ್ವಿಕ ಹಿನ್ನೆಲೆಯಲ್ಲಿ ನೋಡಿದರೆ ನಗರೀಕರಣ ಎಂಬ ಪರಿಕಲ್ಪನೆ ಹೆಚ್ಚು ವ್ಯಾಪಕಾರ್ಥವನ್ನುಳ್ಳದ್ದು

ಕಸುಬುದಾರರು ತಮ್ಮ ವೃತ್ತಿಗಳಲ್ಲಿ ಗುಣಾತ್ಮಕ ಹಾಗೂ ಪರಿಮಾಣಾತ್ಮಕ ಮೇಲ್ಮೆಯನ್ನು ಸಾಧಿಸಲು ಹೊರಟಾಗ ಇದು ಬಂಡವಾಳಶಾಹಿತ್ವದ ಬೆಳವಣಿಗೆಗೂ ಪರ್ಯಾಯವಾಗಿ ಪೋಷಕವಾಯಿತೆಂಬುದನ್ನು ತಿಳಿಯಬಹುದಾಗಿದೆ. ಊಳಿಗಮಾನ್ಯ ವ್ಯವಸ್ಥೆಯ ಶೋಷಣೆಯಿಂದ ತಪ್ಪಿಸಿಕೊಳ್ಳಲು ಕಸುಬುದಾರರು ಈ ವ್ಯವಸ್ಥೆಯ ಹೊರವಲಯದಲ್ಲಿ ಸ್ವತಂತ್ರವಾಗಿ ಆರಂಭಿಸಿದ ವೃತ್ತಿಗಳು ಉತ್ಪಾದನಾ ಸಂಬಂಧದಲ್ಲಿ ಬದಲಾವಣೆ ತಂದು ಸಾಮಾಜಿಕ ಪರಿವರ್ತನೆಗೆ ಅಡಿಪಾಯವಾದವು. ಈ ಬೆಳವಣಿಗೆಯನ್ನು ಕೈಗಾರಿಕಾ ಕ್ರಾಂತಿಯ ಹಿನ್ನೆಲೆಯಿಂದಲೇ ನೋಡಬೇಕು ಎನ್ನುವ ವಾದ ತಪ್ಪಾಗುತ್ತದೆ. ಏಕೆಂದರೆ ಕೈಗಾರಿಕಾ ಕ್ರಾಂತಿ ಯುರೋಪ್‌ನಲ್ಲಾದ ಒಂದು ಚಾರಿತ್ರಿಕ ಬೆಳವಣಿಗೆ. ಇದು ಬೇರೆ ಪ್ರದೇಶದಲ್ಲೂ ಪುನರಾವರ್ತನೆಗೊಳ್ಳುವುದು ಅಸಂಭವ. ಆದರೆ ಯುರೋಪ್ ಕೇಂದ್ರಿತ ಅಧ್ಯಯನಗಳಲ್ಲಿ ಕಂಡುಬರುವ ವಿಷಯವೆಂದರೆ, ಕೈಗಾರಿಕಾ ಕ್ರಾಂತಿಯಿಂದಾಗಿ ಪ್ರಪಂಚದ ಎಲ್ಲಾ ಭಾಗದಲ್ಲೂ ಉತ್ಪಾದನಾ ಸಂಬಂಧಗಳಲ್ಲಿ ಬದಲಾವಣೆಗಳು ಉಂಟಾಗಿವೆ ಮತ್ತು ಇದು ನೇರವಾಗಿ ಸಾಮಾಜಿಕ ಪರಿವರ್ತನೆಗೂ ಕಾರಣವಾಗುತ್ತದೆ. ಹಿಂದುಳಿದ ರಾಷ್ಟ್ರಗಳಲ್ಲಿ ವಸಾಹತುಶಾಹಿ ನೀತಿಯ ಅನುಷ್ಠಾನದಿಂದಾಗಿ ಕೈಗಾರಿಕೀಕರಣಕ್ಕೆ ಪೂರಕವಾಗುವಂತಹ ಉತ್ಪಾದನಾ ವ್ಯವಸ್ಥೆಗೆ ಒತ್ತು ನೀಡಲಾಯಿತು. ಈ ರೀತಿಯ ಬೆಳವಣಿಗೆಯಿಂದಾಗಿ ನಗರೀಕರಣ ಪ್ರಕ್ರಿಯೆಯ ಮೂಲಸ್ವರೂಪವನ್ನೇ ತಪ್ಪಾಗಿ ಅರ್ಥೈಸಿಕೊಳ್ಳುವ ಸಂಭವವಿದೆ. ನಗರೀಕರಣವನ್ನು ವಸಾಹತುಶಾಹಿ ಪರಿಕಲ್ಪನಾತ್ಮಕ ಚೌಕಟ್ಟಿನಲ್ಲಿ (ಸಂಕುಚಿತಾರ್ಥದಲ್ಲಿ) ಅಭ್ಯಸಿಸಿದಾಗ ಮತ್ತು ವಿಶಾಲಾರ್ಥದಲ್ಲಿ ಅಧ್ಯಯನ ನಡೆಸಿದಾಗ ಸಿಗುವ ಫಲಿತಾಂಶ ಬೇರೆ ಬೇರೆಯೇ ಆಗಿದೆ ಎನ್ನುವ ವಾಸ್ತವಿಕವಾದ ನಮ್ಮಲ್ಲಿ ಜಾಗೃತವಾಗಿರಬೇಕಾಗುತ್ತದೆ.

ವರ್ತಕ ಸಂಘಗಳು

ವರ್ತಕ ಸಂಘಗಳ ಬಗ್ಗೆ ವಿಮರ್ಶೆ ನಡೆಸದೆ ನಗರಗಳ ಅಧ್ಯಯನ ಮಾಡುವುದು ಪರಿಪೂರ್ಣ ಅಧ್ಯಯನವಾಗಲಾರದು. ಸಾಮಾನ್ಯವಾಗಿ ವೃತ್ತಿಗಳು ಹುಟ್ಟಿ ಬೆಳೆದ

ತರುವಾಯವೇ ಸಂಘಗಳ ರಚನಾಕಾರ್ಯ ಆರಂಭಗೊಳ್ಳುತ್ತದೆ. ಎಲ್ಲ ವೃತ್ತಿಗಳೂ ಸಂಘಗಳಾಗಿ ರೂಪಗೊಳ್ಳಲಿಲ್ಲ. ಕೆಲವೊಂದು ಪ್ರಮುಖ ವೃತ್ತಿಯವರು ಮಾತ್ರ ಸಂಘಗಳನ್ನು ಸಂಯೋಜಿಸಿಕೊಂಡರು. ಹೀಗೆ ಸಮಾನ ವೃತ್ತಿಯವರು ತಮ್ಮ ಸಮಾಜದ ಅಥವಾ ಸಮುದಾಯದ ಜನರೊಂದಿಗೆ ಸೇರಿಕೊಂಡು ಕಟ್ಟಿದ ಶ್ರೇಣಿಗಳೇ ಸಂಘಗಳು ಎಂಬುದು ಇತಿಹಾಸದಿಂದ ತಿಳಿದು ಬರುವ ಸಂಗತಿ. ಈ ಸಂಘಗಳ ರಚನಾ ಸ್ವರೂಪ, ಕಾರ್ಯನಿರ್ವಹಣೆ, ವಾಣಿಜ್ಯ ಲಾಭ, ಸಾಮಾಜಿಕ ಗೌರವ, ಪ್ರಭಾವ ಇತ್ಯಾದಿ ಅಂಶಗಳು ನಗರಗಳ ಅಳಿವು-ಉಳಿವುಗಳಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸಿದೆ. ಈ ಸಂಘಗಳು ರೂಪುಗೊಳ್ಳುವುದಕ್ಕೆ, ಸಮುದಾಯ ಜೀವನ ಮತ್ತು ಸಹಕಾರ ತತ್ವಗಳು ಸಮಾಜ ವ್ಯವಸ್ಥೆಯಲ್ಲಿ ಸೇರಿಕೊಂಡಿರುವುದೇ ಮುಖ್ಯ ಕಾರಣವಾಗಿರಬೇಕು. ಕಾಲಕ್ರಮೇಣ ಇದು ವಿಕಾಸಗೊಂಡು, ವೈವಿಧ್ಯಮಯವಾಗಿ ಬೆಳೆಯಿತು. ಸ್ವಹಿತ ರಕ್ಷಣೆ, ವೃತ್ತಿ ಸೌಕರ್ಯ, ಸಾಮಾಜಿಕ ಸ್ಥಾನಮಾನಗಳಿಗಾಗಿಯೂ ಸಂಘಟನೆಗಳನ್ನು ರಚಿಸಿರುವುದನ್ನು ನಾವು ಗುರುತಿಸಬಹುದು.

ಮಧ್ಯಯುಗೀನ ನಗರಗಳಲ್ಲಿ ವರ್ತಕ ಸಂಘಗಳು ಹೆಚ್ಚು ಅಧಿಕಾರ ಮತ್ತು ಸವಲತ್ತನ್ನು ಹೊಂದಿರುತ್ತಿದ್ದವು. ಇವುಗಳ ಕಾರ್ಯವೈಖರಿ ನಗರದಿಂದ ನಗರಕ್ಕೆ ಭಿನ್ನವಾಗಿರುತ್ತಿತ್ತು. ಕೆಲವು ನಗರಗಳು ವರ್ತಕ ಸಂಘಗಳ ನೇರ ಹತೋಟಿಯಲ್ಲಿದ್ದರೆ, ಇನ್ನಿತರ ನಗರಗಳಲ್ಲಿ ವರ್ತಕ ಸಂಘಗಳು ಇತರ ಆಡಳಿತ ವರ್ಗಗಳೊಡನೆ ಸೇರಿ ಆಡಳಿತ ನಡೆಸುತ್ತಿದ್ದವು. ಹೆಚ್ಚು ಸಂಖ್ಯೆಯಲ್ಲಿ ವರ್ತಕ ಸಂಘಗಳು ಪಟ್ಟಣ ಮತ್ತು ಮಾರುಕಟ್ಟೆ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದರೆ ಅದು ವ್ಯಾಪಾರ ಚಟುವಟಿಕೆ ಮತ್ತು ನಗರ ಕೇಂದ್ರಗಳ ಬೆಳವಣಿಗೆಯ ಸಾಂದರ್ಭಿಕ ಸಂಬಂಧವನ್ನು ತಿಳಿಸುತ್ತದೆ. ಭಾರತದಲ್ಲಿ ಈ ಪ್ರಕ್ರಿಯೆ 10ನೇ ಶತಮಾನದಿಂದ ನಡೆದು ಬಂದಿದೆ. ಯುರೋಪ್ ಖಂಡದಲ್ಲೂ ವರ್ತಕ ಸಂಘಗಳು 10 ಮತ್ತು 11ನೆಯ ಶತಮಾನಗಳಲ್ಲಿ ಕಾಣಿಸಿಕೊಂಡವು. ಕೆಲವೊಂದು ಹಳ್ಳಿಗಳು ನಗರಗಳಾಗಿ ಪರಿವರ್ತನೆ ಹೊಂದುವುದಕ್ಕೂ ವರ್ತಕ ಸಂಘಗಳು ಕಾರಣಗಳಾಗಿವೆ. ಬೇರೆ ಬೇರೆ ವಂಶದ ಅರಸರು ವರ್ತಕರನ್ನು ಹಳ್ಳಿಯಲ್ಲಿಯೇ ವಾಸಿಸುವಂತೆ ಮಾಡಿ ಅಲ್ಲಿ ವ್ಯಾಪಾರ ಚಟುವಟಿಕೆ ವೃದ್ಧಿಸಿ ಅದೊಂದು ಪಟ್ಟಣವಾಗುವಂತೆ ಮಾಡಿರುವುದರ ಬಗ್ಗೆ ಉಲ್ಲೇಖವಿದೆ.

ವರ್ತಕರಿಗೆ ವಿಶೇಷ ಸವಲತ್ತು ಮತ್ತು ರಿಯಾಯಿತಿಗಳನ್ನು ನೀಡಲಾಗುತ್ತಿತ್ತು. ಉದಾಹರಣೆಗೆ, ಸುಂಕರಹಿತ ಮಳಿಗೆಗಳು. ಈ ರೀತಿಯ ಉದಾರವಾದಿ ನೀತಿಗಳಿಂದಾಗಿ ಕೆಲವೊಂದು ಹಳೆಯ ಪಟ್ಟಣಗಳು ಹೊಸ ರೂಪವನ್ನು ಪಡೆದವು. ಕ್ರಮೇಣ ವರ್ತಕ ಸಂಘಗಳು ತಮ್ಮ ವರ್ಚಸ್ಸನ್ನು ಹೆಚ್ಚಿಸಿಕೊಂಡವು. ವ್ಯಾಪಾರಸ್ಥರ ಹಿತಾಸಕ್ತಿಗಳನ್ನು ಕಾಪಾಡುವುದು ಮತ್ತು ಅವರಿಗೆ ರಕ್ಷಣೆಯನ್ನು ಒದಗಿಸುವುದು ಈ ಸಂಘಗಳ ಧ್ಯೇಯವಾಗಿದೆ. ಇವು ತೆರಿಗೆಯನ್ನು ಸಂಗ್ರಹಿಸುವ ಮತ್ತು ಹೊಸ ತೆರಿಗೆಯನ್ನು ವಿಧಿಸುವ ವಾಣಿಜ್ಯ ಚಟುವಟಿಕೆಗಳಲ್ಲೂ ಭಾಗವಹಿಸುತ್ತಿದ್ದವು. ಕೆಲವು ಸಂದರ್ಭಗಳಲ್ಲಿ

ನ್ಯಾಯಾಂಗವಾಗಿಯೂ ಕಾರ್ಯನಿರ್ವಹಿಸುತ್ತಿದ್ದವು. ಪಟ್ಟಣಗಳಲ್ಲಿ ಶೈಕ್ಷಣಿಕ ಸಂಸ್ಥೆಗಳನ್ನು ನಡೆಸುತ್ತಿದ್ದವು. ವರ್ತಕ ಸಂಘಗಳು ತಾವು ಸಂಗ್ರಹಿಸಿದ ತೆರಿಗೆಯ ಹಣವನ್ನು ಕೆಲವೊಂದು ರಚನಾತ್ಮಕ ಮತ್ತು ಸಾರ್ವಜನಿಕ ಕೆಲಸಗಳಿಗೆ ಉಪಯೋಗಿಸುತ್ತಿದ್ದವು. ಮುಖ್ಯವಾಗಿ ಕಾಲುವೆಗಳು, ಟ್ಯಾಂಕುಗಳು, ದೇವಸ್ಥಾನಗಳು ಇತ್ಯಾದಿ. ಇವು ಠೇವಣಿಗಳನ್ನು ಸ್ವೀಕರಿಸಿ ಬಡ್ಡಿಗೆ ಹಣವನ್ನು ವ್ಯಾಪಾರಸ್ಥರಿಗೆ ಹಾಗೂ ಇನ್ನಿತರರಿಗೆ ನೀಡುತ್ತಿದ್ದವು. ಈ ರೀತಿಯಾಗಿ ವರ್ತಕ ಸಂಘಗಳು ನಗರಗಳ ಬೆಳವಣಿಗೆಯ ಕಾಲಗತಿಯಲ್ಲಿ ನೇರವಾಗಿ ಭಾಗಿಗಳಾಗುತ್ತಿದ್ದವು. ನಗರೀಕರಣ ಪ್ರಕ್ರಿಯೆಯಲ್ಲಿ ನಾವು ವ್ಯಾಪಾರದ ಸ್ವರೂಪವನ್ನು ಸಂತೆ, ಅಂಗಡಿ, ಪೇಟೆ-ಪಟ್ಟಣಗಳ ಮೂಲಕವೂ ಗುರುತಿಸಬಹುದು. ಸಂತೆಯಲ್ಲಿ ಬಯಲು ಅಂಗಡಿ, ಕಟ್ಟಿದ ಅಂಗಡಿಗಳಿದ್ದು, ಸಂತೆಯ ದಿನ ಮಾತ್ರ ತೆರೆದಿರುತ್ತದೆ. ಪೇಟೆ ಪಟ್ಟಣಗಳಲ್ಲಿಯ ಕಟ್ಟಿದ ಅಂಗಡಿಗಳು ಪ್ರತಿನಿತ್ಯ ಕಾರ್ಯನಿರ್ವಹಿಸುತ್ತವೆ. ಇವುಗಳ ಕಾರ್ಯವೈಖರಿಯಲ್ಲಿ ಮತ್ತು ಮಾರಾಟ ಸುಂಕಗಳಲ್ಲಿ ಆಯಾ ಕಾಲ ಪ್ರದೇಶಗಳಲ್ಲಿ ವ್ಯತ್ಯಾಸವಿರುವುದು ಸಹಜ. ಇದು ವರ್ತಕ ಸಂಘಗಳ ಸ್ವರೂಪವನ್ನೂ ಅವಲಂಬಿಸಿರುತ್ತದೆ.

ಮಾನವ ಜೀವನದ ಇತಿಹಾಸದಲ್ಲಿ ಸಂಘ ಜೀವನ ಅತ್ಯಂತ ಮಹತ್ವದ ಘಟ್ಟವೆನಿಸಿದೆ. ಸಹಕಾರ ತತ್ವ, ಸಂಘಟನಾಶಕ್ತಿ, ಸಹ ಬಾಳ್ವೆಗಳು ಹಸಿಹಸಿಯಾಗಿ ಕಾಣಿಸಿಕೊಂಡುದು ಈ ಘಟ್ಟದಲ್ಲಿಯೇ. ವ್ಯಾಪಾರ ಸಂಘಗಳ ರಚನೆಗೆ ಇವೇ ಪ್ರೇರಕ ಅಂಶಗಳಾಗಿ ಪರಿಣಮಿಸಿರಬೇಕು. ವರ್ತಕ ಸಂಘಗಳನ್ನು ನಾವು ಜನಾಂಗ ನಿಷ್ಠ ಮತ್ತು ಪ್ರದೇಶನಿಷ್ಠ ಎಂಬುದಾಗಿಯೂ ವಿಂಗಡಿಸಬಹುದು. ಈ ವಿಂಗಡನೆ ಅವುಗಳ ಕಾರ್ಯವೈಖರಿಯನ್ನು ಅವಲಂಬಿಸಿರುತ್ತದೆ. ವರ್ತಕ ಸಂಘಗಳು ಹೆಚ್ಚಿನ ಅಧಿಕಾರ ಮತ್ತು ಸವಲತ್ತನ್ನು ಹೊಂದಲು ಕಾರಣ ಅಧಿಕಾರದ ವಿಕೇಂದ್ರೀಕರಣ. ಕೆಲವೊಮ್ಮೆ ವರ್ತಕ ಸಂಘಗಳು ತಮ್ಮ 'ಅಧಿಕಾರ' ಚಲಾಯಿಸಲು ಹೊರಟಾಗ ಆಡಳಿತದಲ್ಲಿ ಏರುಪೇರುಗಳಾಗುವುದು ಸಹಜ ಮತ್ತು ನಗರಗಳಲ್ಲಿ ಅರಾಜಕತೆಯೂ ಉಂಟಾಗಬಹುದು. ಮಧ್ಯಯುಗದ ವರ್ತಕ ಸಂಘಗಳನ್ನು ಆಧುನಿಕ ಕಾಲದ ಟ್ರೇಡ್ ಯೂನಿಯನ್‌ಗಳಿಗೆ ಹೋಲಿಸುವುದು ಸರಿಯಲ್ಲ. ವರ್ತಕ ಸಂಘಗಳು ನಗರಗಳ ಬೆಳವಣಿಗೆಗೆ ಸಹಕಾರಿಯಾಗಿದ್ದರೂ, ಬಂಡವಾಳವನ್ನು ಕ್ರೋಢೀಕರಿಸಿ ಬಂಡವಾಳಶಾಹಿ ನೀತಿ ತನ್ನ ಅಸ್ತಿತ್ವವನ್ನು ಕಂಡುಕೊಳ್ಳುವುದಕ್ಕೆ ಪೂರಕವಾಗಿರುವುದು ಇತಿಹಾಸದಿಂದ ತಿಳಿದುಬರುವ ಸತ್ಯ. ಟ್ರೇಡ್ ಯೂನಿಯನ್‌ಗಳು ಬಂಡವಾಳಶಾಹಿ ನೀತಿಯನ್ನು ವಿರೋಧಿಸಿ ಇತಿಹಾಸದಲ್ಲಿ ಆಲೋಚನೆಗಳ ಹೊಸ ಆಯಾಮಗಳನ್ನು ಸೃಷ್ಟಿಸಿವೆ.

ನಗರ ಸಮಾಜ

ನಗರೀಕರಣವು ಒಂದು ಐತಿಹಾಸಿಕ ಪ್ರಕ್ರಿಯೆಯಾಗಿದ್ದು ಅದು ವಿಶಿಷ್ಟವಾದ ಸಾಮಾಜಿಕ ಬೆಳವಣಿಗೆಯನ್ನು ಪ್ರತಿನಿಧಿಸುತ್ತಿರುತ್ತದೆ. ಈ ಬೆಳವಣಿಗೆಯಲ್ಲಿ ರಕ್ತ ಸಂಬಂಧ

ಪ್ರಾಮುಖ್ಯತೆಯನ್ನು ಪಡೆಯುವುದಿಲ್ಲ. ಯಾಕೆಂದರೆ ನಗರವಾಸಿಗಳು ಯಾಂತ್ರಿಕ ಜೀವನವನ್ನು ನಡೆಸುವ ಸ್ಪರ್ಧಾತ್ಮಕ ಮನೋಭಾವದವರಾಗಿರುತ್ತಾರೆ. ಇದರರ್ಥ ಶೋಷಣೆಗೆ ಆಸ್ಪದವಿಲ್ಲ ಎಂದಲ್ಲ, ಶೋಷಣೆಯೂ ನಡೆಯುತ್ತಿರುತ್ತದೆ. ಗ್ರಾಮೀಣ ಸಮಾಜದಲ್ಲಿರುವ ಹೆಚ್ಚಿನ ಎಲ್ಲಾ ಅಂಶಗಳೂ ನಗರಗಳಲ್ಲಿ ಇದ್ದರೂ ಅವು ದ್ವಂದ್ವದಲ್ಲಿರುತ್ತವೆ ಮತ್ತು ಅವನ್ನು ಪ್ರಶ್ನಿಸುವ ಒಂದು ಹೊಸ ವ್ಯವಸ್ಥೆ ರೂಪುಗೊಳ್ಳುತ್ತಿರುತ್ತದೆ. ನಗರ ಸಮಾಜದ ಉನ್ನತ ಮೌಲ್ಯವೆಂದರೆ ಜಾತ್ಯಾತೀತತೆ. ಜಾತ್ಯಾತೀತತೆಯನ್ನೇ ಆಧಾರವನ್ನಾಗಿಟ್ಟುಕೊಂಡು ನಗರ ಸಮಾಜದ ಸ್ವರೂಪವನ್ನು ಅಧ್ಯಯನ ಮಾಡುವುದು ವ್ಯರ್ಥ ಮತ್ತು ಕಲ್ಪನಾ ಸೃಷ್ಟಿ ಆಗಬಹುದೇನೋ ಎನ್ನುವುದು ನನ್ನ ಅಭಿಪ್ರಾಯ. ಮೂಢನಂಬಿಕೆ, ಅಂಧಕಾರ, ಜಾತೀಯತೆ, ಸಂಪ್ರದಾಯಗಳ ಪರದೆ ಸರಿದು ಮಾನವಧರ್ಮ ಮತ್ತು ಬದಲಾವಣೆ ಎಂಬ ಪರಿಕಲ್ಪನೆಯೊಡನೆ ಜಾತ್ಯಾತೀತತೆ ರೂಪುಗೊಂಡರೆ ಅದು ನಗರ ಸಮಾಜದ ಉನ್ನತ ಮೌಲ್ಯವಾಗುತ್ತದೆ. ಈ ಪ್ರಕ್ರಿಯೆಗೆ ತದ್ವಿರುದ್ಧವಾಗಿ ಆಧುನಿಕ ನಗರಗಳಲ್ಲಿ ಮಾನವ ಧರ್ಮದ ಗೋರಿಯೂ ನೆಲಸಮವಾಗುತ್ತಿರುವ ಚಿತ್ರಣ ನಮ್ಮ ಮುಂದಿದೆ. ಪ್ರಾಚೀನ ಮತ್ತು ಮಧ್ಯಯುಗೀನ ನಗರ ಸಮಾಜದಲ್ಲಿ ನಾವು ಬೇರೆ ಬೇರೆ ಶ್ರೇಣಿಗಳನ್ನು ಕಾಣಬಹುದು. ಮುಖ್ಯವಾಗಿ ಆಳುವ ವರ್ಗ, ಪುರೋಹಿತರು, ಆಡಳಿತವರ್ಗದವರು, ಸ್ವತಂತ್ರ ಉದ್ಯೋಗ ನಡೆಸುವವರು, ವ್ಯಾಪಾರಸ್ಥರು, ಕಲಾವಿದರು, ವೇಶ್ಯೆಯರು ಮತ್ತು ಇನ್ನಿತರ ಗುಂಪಿನವರು. ಆಧುನಿಕ ನಗರ ವ್ಯವಸ್ಥೆಯಲ್ಲೂ ಈ ರೀತಿಯ ಶ್ರೇಣೀಕೃತ ವ್ಯವಸ್ಥೆಯನ್ನು ಕಾಣಲು ಸಾಧ್ಯ. ಅಧಿಕಾರ ಶಾಹಿ ನೀತಿ ನಗರಗಳ ಇತಿಹಾಸದಲ್ಲಿ ಹಾಸುಹೊಕ್ಕಾಗಿರುವುದರಿಂದ ನಗರ ವ್ಯವಸ್ಥೆ ಸಂಕೀರ್ಣಗೊಂಡಿರುವುದು ಸಹಜವೆನಿಸುತ್ತದೆ.

ನಗರ ವರ್ಗ ವಿಭಜನೆಯ ಸ್ವರೂಪವನ್ನು ಗಮನಿಸಿದಾಗ ಎರಡು ಗುಂಪುಗಳ ಅಸ್ತಿತ್ವವು ವ್ಯಕ್ತವಾಗುತ್ತದೆ. ಒಂದು ಮೇಲು ವರ್ಗ, ಎರಡನೆಯದು ಕೆಳವರ್ಗ, ಮೇಲು ವರ್ಗದಲ್ಲಿ ಉನ್ನತ ಅಧಿಕಾರಿಗಳು, ಅವರ ಆಪ್ತ ಸಹಾಯಕರು ಮತ್ತು ಶ್ರೀಮಂತ ವ್ಯಾಪಾರಸ್ಥರು ಇದ್ದರೆ, ಕೆಳವರ್ಗದಲ್ಲಿ ಬಡ ವ್ಯಾಪಾರಸ್ಥರು, ಕುಶಲಕರ್ಮಿಗಳು ಹಾಗೂ ಇನ್ನಿತರ ಕೆಳವರ್ಗದ ಅಧಿಕಾರಿಗಳು ಇರುತ್ತಾರೆ. ನಗರಗಳಲ್ಲಿ ಕೆಲವೊಂದು ವರ್ಗದವರು ತುಂಬಾ ತುಳಿತಕ್ಕೆ ಒಳಗಾಗಿರುವುದು ನಗರ ಅಧ್ಯಯನದಿಂದ ತಿಳಿದು ಬರುವ ವಿಚಾರವಾಗಿದೆ. ಆದರೆ ಹೊಸ ನಗರ ವ್ಯವಸ್ಥೆಯಲ್ಲಿ ಔದ್ಯೋಗಿಕರಣದಿಂದಾಗಿ ಸಾಂಪ್ರದಾಯಿಕ ಸಂಗತಿಗಳು ಕಣ್ಮರೆಯಾಗುತ್ತಾ ತುಳಿತಕ್ಕೆ ಒಳಗಾದ ವರ್ಗಗಳು ಹೆಚ್ಚಿನ ಶಕ್ತಿಯನ್ನು ಪಡೆಯುತ್ತಿವೆ. ಉದಾಹರಣೆಗೆ: ವೈಶ್ಯರು ವ್ಯಾಪಾರದಲ್ಲಿ ಪ್ರಗತಿಯನ್ನು ಹೊಂದಿದಂತೆ ಇವರು ತಮ್ಮಲ್ಲಿ ತಾವೇ ಪ್ರಗತಿಯನ್ನು ಕಾಣುವಂತಾಯಿತು. ಸಂಪ್ರದಾಯ ವಾದಿಗಳ ಹಿಡಿತದಲ್ಲಿದ್ದ ನಗರ ವ್ಯವಸ್ಥೆ ತನ್ನ ಪರಿಧಿಯನ್ನು ವಿಸ್ತರಿಸಿಕೊಂಡಾಗ ಮತ್ತು ಹೊಸ ಆರ್ಥಿಕ, ಸಾಮಾಜಿಕ ನೀತಿಗೆ ಹೊಂದಿಕೊಂಡಾಗ ಬದಲಾವಣೆ ಸಹಜವೆನಿಸುತ್ತದೆ. ಸಾಂಪ್ರದಾಯಿಕ ಪರಿಕಲ್ಪಿತ ವ್ಯವಸ್ಥೆಯನ್ನು ಒಡೆದು ಬದುಕಿನ ಹೊಸ ಆಯಾಮಗಳು ರೂಪುಗೊಳ್ಳಬೇಕಾಗಿರುವುದು ಇಂದಿನ ನಗರಗಳ ತುರ್ತು ಕೂಡಾ ಆಗಿದೆ.

ನಗರ ಸಂಸ್ಕೃತಿ

ನಗರಗಳು ಕೆಲವೊಂದು ಮೂಲಭೂತ ರಚನಾತ್ಮಕ ಬದಲಾವಣೆಗಳನ್ನು ತಂದಿವೆ. ನಗರ ಕೇಂದ್ರಗಳು ಹೊಸ 'ನಗರ ಸಂಸ್ಕೃತಿ'ಯನ್ನು ಹುಟ್ಟು ಹಾಕಿವೆ. ಈ ಹೊಸ ಸಂಸ್ಕೃತಿಯು ನಗರ ಪೂರ್ವ ಅಥವಾ ಸಮಕಾಲೀನ ಗ್ರಾಮೀಣ ಸಂಸ್ಕೃತಿಗಿಂತ ಭಿನ್ನವಾದದ್ದಾಗಿದೆ. ನಗರಗಳಲ್ಲಿನ ಪ್ರತಿಯೊಂದು ಸಾಂಸ್ಕೃತಿಕ ಬದಲಾವಣೆಯು ಇಲ್ಲಿನ ಜನಜೀವನದಿಂದ ಪ್ರೇರೇಪಣೆಗೊಂಡಿರುತ್ತವೆ. ಅದೇ ರೀತಿ ಬೇರೆ ಬೇರೆ ಸಂಸ್ಕೃತಿಗಳ ಪ್ರಭಾವಕ್ಕೂ ಒಳಗಾಗಿರುತ್ತವೆ. ನಗರ ಸಂಸ್ಕೃತಿಯು ಮುಕ್ತವಾಗಿದ್ದು ಎಲ್ಲಾ ತರದ ಸಾಂಸ್ಕೃತಿಕ ಆಗು -ಹೋಗುಗಳು ನಗರವಾಸಿಗಳ ಅಭಿರುಚಿಯಲ್ಲಾದ ಬದಲಾವಣೆಯ ಸಂಕೇತವಾಗಿರುತ್ತದೆ. ಒಂದು ಪ್ರದೇಶದಿಂದ ಇನ್ನೊಂದೆಡೆಗೆ ವಲಸೆ ಹೋಗುವ ಜನರು ಎರಡು ರೀತಿಯ ಸಂಸ್ಕೃತಿಯ ಬೆಳವಣಿಗೆಗೆ ಕಾರಣರಾಗುತ್ತಾರೆ, ಅವರು ಹೊಸದಾಗಿ ಬಂದ ಪ್ರದೇಶದ ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ತಮ್ಮದೇ ಆದ ಸಂಸ್ಕೃತಿಯೂ ಪ್ರಚಾರ ವಾಗುವ ರೀತಿಯಲ್ಲಿ ವ್ಯವಹರಿಸುತ್ತಾರೆ. ಇದರಿಂದಾಗಿ ಸಂಸ್ಕೃತಿಯ ಸಂಕೀರ್ಣತೆ ಮತ್ತು ಕೆಲವೊಮ್ಮೆ ವಿರೋಧಾಭಾಸವೂ ಉಂಟಾಗುತ್ತದೆ. ಹೊಸ ನಗರ ಸಂಸ್ಕೃತಿಯು ತಾಂತ್ರಿಕ ಪ್ರಗತಿಯಿಂದಲೂ ರೂಪುಗೊಳ್ಳುತ್ತದೆ. ನಗರಗಳು ತಾಂತ್ರಿಕ ಪ್ರಗತಿ ಹೊಂದಿದ ನಗರವಾಸಿಗಳ ಸಾಂಸ್ಕೃತಿಕ ಬೇಕು -ಬೇಡಗಳನ್ನು ಈಡೇರಿಸುವ ಮಹತ್ತರ ಹೊಣೆ ಹೊತ್ತಿವೆ. ನಗರ ನಾಗರೀಕತೆಯ ತಾಂತ್ರಿಕತೆಯು ಹೆಚ್ಚುವರಿ ಬುದ್ದಿಮತ್ತೆಯನ್ನು ಅವಲಂಬಿಸಿರುತ್ತದೆ. ಇದೊಂದು ಸೈದ್ಧಾಂತಿಕ ಚೌಕಟ್ಟನ್ನು ಒದಗಿಸಿಕೊಡುವುದರ ಮೂಲಕ ನಗರ ಮತ್ತು ಗ್ರಾಮೀಣ ಎಂಬ ಎರಡು ವಿಭಿನ್ನ ಸಂಸ್ಕೃತಿಯು ರೂಪುಗೊಳ್ಳುವುದಕ್ಕೆ ಸಹಕಾರಿಯಾಗುತ್ತದೆ.

ನಗರ ಸಮಾಜದ ರೀತಿಯಲ್ಲೇ ನಗರ ಸಂಸ್ಕೃತಿಯೂ ಜಾತ್ಯಾತೀತ ಚೌಕಟ್ಟಿನಲ್ಲಿರುತ್ತದೆ. ನಗರ ಸಂಸ್ಕತಿಯ ಉಳಿವಿಗೆ ಇದು ಅತ್ಯಗತ್ಯವಾಗಿದೆ. ಉದಾಹರಣೆಗೆ, ಜ್ಯಾತ್ಯಾತೀತ ಬರವಣಿಗೆ, ನಾಟಕ, ಕಲೆ ಮತ್ತು ಇನ್ನಿತರ ಸಾಂಸ್ಕೃತಿಕ ಚಟುವಟಿಕೆಗಳು. ನಗರಗಳಲ್ಲಿ ಉದಾರವಾದಿ ತತ್ವ ಜಾತ್ಯಾತೀತತೆಯ ಬೇರುಗಳನ್ನು ಬಲಗೊಳಿಸಿದೆ. ನಗರಗಳ ಸಮಗ್ರ ಅಧ್ಯಯನವನ್ನು ಕೈಗೊಂಡಾಗ ಎರಡು ವಿಭಿನ್ನ ಗುಂಪುಗಳನ್ನು ಗುರುತಿಸಬಹುದು. ಆರ್ಥಿಕವಾಗಿ ಶ್ರೀಮಂತರು ಮತ್ತು ಸಾಮಾಜಿಕವಾಗಿ ಉನ್ನತ ಮಟ್ಟದಲ್ಲಿರುವವರು, ಒಂದು ವರ್ಗ. ಆರ್ಥಿಕವಾಗಿ ಬಡವರು ಮತ್ತು ಸಾಮಾಜಿಕವಾಗಿ ಕೆಳಮಟ್ಟದಲ್ಲಿರುವವರು ಇನ್ನೊಂದು ವರ್ಗ. ಇದು ನಗರ ಸಮಾಜದ ಎರಡು ಮುಖಗಳಾಗಿವೆ. ಇವರ ಜೀವನ ಶೈಲಿ ಆಸಕ್ತಿ ಅಭಿರುಚಿಗಳು ಸಂಪೂರ್ಣವಾಗಿ ಭಿನ್ನವಾಗಿದೆ. ಈ ರೀತಿಯ ಭಿನ್ನತೆ ಇರುವ ಸಮಾಜದಲ್ಲಿ ಸಾಂಸ್ಕೃತಿಕ ಏಕರೂಪತೆ ಇರಲು ಹೇಗೆ ಸಾಧ್ಯ? ಸ್ವಾಭಾವಿಕವಾಗಿಯೇ ನಗರಕೇಂದ್ರಗಳಲ್ಲಿ ಎರಡು ವಿಧದ ಸಾಂಸ್ಕೃತಿಕ ನಮೂನೆಗಳನ್ನು ಕಾಣಬಹುದು. ಇದನ್ನು ನಾವು ಐಷಾರಾಮದ ಸಂಸ್ಕೃತಿ ಮತ್ತು ಐಷಾರಾಮವಲ್ಲದ ಸಂಸ್ಕೃತಿ ಎಂದು ವಿಂಗಡಿಸಬಹುದು. ಈ ರೀತಿಯ ಸಮಾಜ ವ್ಯವಸ್ಥೆ ಸಾಂಸ್ಕೃತಿಕ ದುರಂತದ ಪೂರ್ವ ಸಂಕೇತ ಎನ್ನುವುದು ಮನವರಿಕೆಯಾಗಬೇಕು.

ನಗರಗಳಲ್ಲಿ ವೈವಿಧ್ಯತೆಗಳಿಂದ ಕೂಡಿದ ವಿಭಿನ್ನ ಸ್ವರೂಪದ ವಿಷಮ ಪರಿಸರವು ಸೃಷ್ಟಿಯಾಗಿದೆ. ಶ್ರಮವಿಭಜನೆ ಮತ್ತು ಕಾರ್ಯನೈಪುಣ್ಯಗಳಿಂದಾಗಿ ನಗರ ಜೀವನದಲ್ಲಿ ಪರಸ್ಪರಾವಲಂಬನೆಯು ಅತ್ಯಧಿಕವಾಗಿದೆ. ನಗರಗಳಲ್ಲಿ ವ್ಯಕ್ತಿವಾದಕ್ಕೆ ಪ್ರಾಧಾನ್ಯತೆಯು ಇದ್ದು ವೈಚಾರಿಕತೆಯ ದೃಷ್ಟಿಕೋನ ಪ್ರಧಾನವಾಗಿ ಎದ್ದು ಕಾಣುತ್ತದೆ. ನಗರಗಳಲ್ಲಿ ವೈಯಕ್ತಿಕ ಪ್ರವೃತ್ತಿಯನ್ನು ಪ್ರಕಟಿಸಲು ಸಂಚರಿಸುವವರೇ ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ನಗರಗಳಲ್ಲಿ ಸಾಮಾಜಿಕ ಸಂಚಲನೆಯು ಹೆಚ್ಚು ಸ್ಥಿತಿಸ್ಥಾಪಕ ಗುಣವನ್ನು ಹೊಂದಿರುತ್ತದೆ. ನಗರ ವಲಯಗಳಲ್ಲಿ ವರ್ಗ ಧ್ರುವೀಕರಣ ಚುರುಕಾಗಿರುತ್ತದೆ. ಕೆಲವರು ತಾವು ಬಯಸಿದ ಸುಖವನ್ನೆಲ್ಲ ಪಡೆಯುತ್ತಾ ಸುಖ ಜೀವನ ನಡೆಸಿದರೆ ಅನೇಕರು ಕಡು ಬಡತನ ಅನುಭವಿಸುತ್ತಿದ್ದಾರೆ. ಅವರಿಗೆ ಅಸಂಖ್ಯಾತ ಸಮಸ್ಯೆಗಳಾದ ನಿರುದ್ಯೋಗ, ಅಪಮಾನ, ಮನೆ, ಆರೋಗ್ಯ, ಶಿಕ್ಷಣದ ಕೊರತೆ ಮತ್ತು ಸಾಂಸ್ಕೃತಿಕ ಏರುಪೇರು, ಅಧ್ಯಾತ್ಮಗಳ ಶೂನ್ಯತೆಯಲ್ಲಿ ಜೀವಿಸುತ್ತಿದ್ದಾರೆ. ಅವರ ಕನಸು, ಆಶೆಗಳನ್ನು ಅನುಭವಿಸುವ ನಿಶ್ಚಿತತೆ ಅವರಿಗಿರುವುದಿಲ್ಲ. ಈ ಎರಡು ಧ್ರುವಗಳ ನಡುವೆ ಅವ್ಯವಸ್ಥಿತ ಮಧ್ಯಮ ವರ್ಗವಿದೆ. ಈ ವರ್ಗದ ಮೇಲು ತುದಿಯ ಜನ ಒಂದು ನಟನೆಯ ಪ್ರಪಂಚದಲ್ಲಿ ಬದುಕುತ್ತಿದ್ದಾರೆ. ಸಾಕಷ್ಟು ಸಂಪನ್ಮೂಲವೂ ಇಲ್ಲದೆ ಅಭಿಮಾನಕ್ಕೆ ಧಕ್ಕೆಯೂ ಬರದ ರೀತಿಯಲ್ಲಿ ಜೀವನ ನಡೆಸುತ್ತಿರುವುದರಿಂದಾಗಿ ಬದುಕಿನುದ್ದಕ್ಕೂ ಒದ್ದಾಡುವ ಪರಿಸ್ಥಿತಿ ಅವರದ್ದಾಗಿದೆ.

ದೇವನು ಹಳ್ಳಿಗಾಡನ್ನು ಸೃಷ್ಟಿಸಿದ; ಮಾನವನು ನಗರವನ್ನು ನಿರ್ಮಿಸಿದ ಎಂಬ ಹೇಳಿಕೆ ಪ್ರಚಲಿತವಿದೆ. ಇಲ್ಲಿ ದೇವನು ಎಂದರೆ ಹಳ್ಳಿಯ ಸುಂದರ ಪರಿಸರ ಮತ್ತು ಮೌಲ್ಯಗಳನ್ನು ಕಲ್ಪಿಸಬಹುದು. ಮಾನವ ನಿರ್ಮಿತ ನಗರಗಳು ಕೃತಕವಾಗಿ ರಚಿಸಲಾದ ಮಾನವೀಯ ನೆಲೆಗಳಾಗಿವೆ. ವಿಷಮ ಸ್ವರೂಪದ ಪರಿಸರವು ಅದರ ಪ್ರಧಾನ ಗುಣಲಕ್ಷಣವಾಗಿದೆ. ಮಾನವ ನಗರಗಳನ್ನು ನಿರ್ಮಿಸುವಾಗ ಸುತ್ತಲಿನ ಪರಿಸರದೊಡನೆ ಹೊಂದಾಣಿಕೆ ಮಾಡಿಕೊಳ್ಳದೇ ಇರುವುದರಿಂದ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂತು. ಬೃಹತ್ ಕಟ್ಟಡಗಳು, ಗಗನಚುಂಬಿ ಕಟ್ಟಡಗಳು ನಗರಗಳಲ್ಲಿ ಕಂಡುಬರುವ ಸಾಮಾನ್ಯ ದೃಶ್ಯಗಳಾಗಿವೆ. ಅಮೇರಿಕಾದ ಚಿಕ್ಯಾಗೊ, ನ್ಯೂಯಾರ್ಕ್, ಜಪಾನದ ಟೋಕಿಯೋ, ಫ್ರಾನ್ಸ್‌ದ ಪ್ಯಾರೀಸ್, ಭಾರತದ ಮುಂಬಯಿ, ಕಲ್ಕತ್ತಾ ನಗರಗಳಲ್ಲಿ ಗಗನಚುಂಬಿ ಕಟ್ಟಡಗಳು ಜನಾಕರ್ಷಕವಾಗಿದೆ. ಇಂತಹ ನಗರಗಳನ್ನು "**ಕಾಂಕ್ರೀಟು ಕಾಡುಗಳು**" ಎಂದೂ ಹೇಳಲಾಗಿದೆ. ಇಲ್ಲಿನ ಸಂಸ್ಕೃತಿಯನ್ನು ಕಾಂಕ್ರೀಟು ಸಂಸ್ಕೃತಿ ಎಂದೂ ಕರೆಯಲಾಗಿದೆ. ಯಾಕೆಂದರೆ ನಗರ ಪ್ರದೇಶಗಳಲ್ಲಿ ಕೃತಕ ಪರಿಸರವು ಸ್ಪಷ್ಟವಾಗಿ ಕಂಡುಬರುತ್ತದೆ. ಬದುಕಿನ ಮೌಲ್ಯ ಪ್ರಾಮಾಣಿಕತೆಗಳ ಮೂಲಧಾತುವನ್ನೇ ಹೀರಿ ಮಾನವನನ್ನು ಷಂಡರನ್ನಾಗಿಸುವ ಪ್ರಯತ್ನ ನಗರಗಳಲ್ಲಿ ನಡೆಯುತ್ತಿದೆಯಾದರೂ, ಮಾನವ ತನ್ನ ಸ್ವರೂಪ ಪ್ರಾಮಾಣಿಕತೆ ಮತ್ತು ಮೌಲ್ಯಗಳನ್ನು ಕಾಯ್ದುಕೊಂಡು ನಗರ ಜೀವನ ನಡೆಸುವುದು ಮಾನವ ಸಂಸ್ಕೃತಿಯ ಲಕ್ಷಣವಾಗಿದೆ.

ನಗರ ಯೋಜನೆ

ನಗರಗಳ ಬೆಳವಣಿಗೆಯು ಪ್ರತಿಯೊಂದು ಹಂತದಲ್ಲೂ ಬದಲಾವಣೆಗಳು ಕಾಣಿಸಿಕೊಳ್ಳುವುದು ಸಹಜ. ಆದರೆ ನಗರಗಳನ್ನು ತನ್ನ ಪಾಡಿಗೆ ತಾನು ಬೆಳೆಯಲು ಬಿಟ್ಟರೆ ಅದು ಅಸ್ತವ್ಯಸ್ತ ರೀತಿಯಲ್ಲಿ ಬೆಳೆಯಬಹುದು. ಅದರ ಬದಲಾವಣೆಯನ್ನು ಅಪೇಕ್ಷಿತ ರೀತಿಯಲ್ಲಿ ಯೋಜನಾಬದ್ಧವಾಗಿ ನಿಯಂತ್ರಿಸುವ ಅವಶ್ಯಕತೆ ಇದೆ. ನಗರದ ದೀರ್ಘ ಕಾಲೀನ ಬೆಳವಣಿಗೆಯನ್ನು ಗಮನದಲ್ಲಿರಿಸಿಕೊಂಡು ದೂರದೃಷ್ಟಿತ್ವದ ಆಲೋಚನೆಯಿಂದ ಕೂಡಿದ ಯೋಜನೆಗಳನ್ನು ರೂಪಿಸಬೇಕಾಗುತ್ತದೆ. ಪ್ರಾಚೀನ ಕಾಲದಿಂದಲೂ ಯೋಜನಾಬದ್ಧವಾಗಿ ನಗರಗಳು ಬೆಳೆಯುವುದಕ್ಕೆ ಶ್ರಮವನ್ನು ಪಟ್ಟಿದ್ದರು ಎನ್ನುವುದು ಪ್ರಾಕ್‌ಚಾರಿತ್ರಿಕ ಮತ್ತು ಸಾಹಿತ್ಯಕ ದಾಖಲೆಗಳಿಂದ ವೇದ್ಯವಾಗುತ್ತದೆ. ಚೀಣಾ, ಭಾರತ, ಈಜಿಪ್ಟ್, ಮೆಡಿಟರೇನಿಯನ್, ದಕ್ಷಿಣ ಮತ್ತು ಮಧ್ಯ ಅಮೇರಿಕಾಗಳಲ್ಲಿ ನಗರ ಯೋಜನೆಗೆ ಮಹತ್ವವನ್ನು ಕೊಟ್ಟಿರುವುದಕ್ಕೆ ಪುರಾವೆಗಳಿವೆ. ನಗರಗಳನ್ನು ಸ್ವೇಚ್ಛಾಪರವಾಗಿ ಬೆಳೆಯಲು ಬಿಟ್ಟರೆ ಅವು ಕೊಳಚೆ ಪ್ರದೇಶಗಳಾಗಿ ಪರಿಣಮಿಸುತ್ತವೆ. ಒಂದು ನಗರದ ಯೋಜನೆ ಕೆಲವೆಲ್ಲಾ ಅಂಶಗಳನ್ನು ಹೊಂದಿರಬೇಕಾಗುತ್ತದೆ.

ಒಂದನೆಯದಾಗಿ, ನಗರದ ವಿಭಜನೆ, ಕ್ರಮಬದ್ಧವಾಗಿ ರೂಪುಗೊಳಿಸಿದ ನಗರ ವಸತಿ ಕೇಂದ್ರಗಳು, ವಾಣಿಜ್ಯ ಸಂಕೀರ್ಣಗಳು, ಆಡಳಿತ ಸೌಧಗಳು, ಮಾರುಕಟ್ಟೆಗಳು ಇತ್ಯಾದಿ. ಇವು ನಗರ ಜೀವನದ ಸಂಕೀರ್ಣತೆಯಲ್ಲೂ ಸರಳತೆಯನ್ನು ತೋರಿಸುತ್ತವೆ.

ಎರಡನೆಯದು, ಸಾರಿಗೆ ವ್ಯವಸ್ಥೆ, ನಗರಗಳನ್ನು ಬೇರೆ ಬೇರೆ ನಗರಗಳೊಡನೆ ಸಂಬಂಧ ಕಲ್ಪಿಸಲು ವ್ಯವಸ್ಥಿತ ಸಾರಿಗೆ ವ್ಯವಸ್ಥೆಯು ಅಗತ್ಯವಿರುತ್ತದೆ. ಇದು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕಿರುವ ಅಂತರವನ್ನು ಕಡಿಮೆಗೊಳಿಸುತ್ತದೆ. ಪ್ರಥಮ ಬಾರಿಗೆ ರೈಲು ಓಡಾಟ ಪ್ರಾರಂಭಿಸಿದಾಗ ಸಾರಿಗೆ ಕೇತ್ರದಲ್ಲಿ ಮತ್ತು ವ್ಯಾಪಾರ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆಗಳಾಗಿದ್ದನ್ನು ನಾವು ಮರೆಯುವಂತಿಲ್ಲ. ಮೂರನೆಯದಾಗಿ, ನಗರಗಳಲ್ಲಿ ವಾಸಿಸುತ್ತಿರುವ ಎಲ್ಲಾ ತರದ ಕುಟುಂಬಗಳ ಬೇಕು ಬೇಡಗಳನ್ನು ಈಡೇರಿಸುವುದು ಮತ್ತು ಅವರ ಮೂಲಭೂತ ಅವಶ್ಯಕತೆಗಳನ್ನು ಒದಗಿಸುವುದು, ಶೈಕ್ಷಣಿಕ ಸಂಸ್ಥೆಗಳನ್ನು ನಿರ್ಮಿಸುವುದು, ಶಿಕ್ಷಣದ ಅರಿವು ಮೂಡಿಸುವುದು, ನಗರವಾಸಿಗಳ ಮಾನಸಿಕ ಸಮತೋಲನವನ್ನು ಕಾಪಾಡುವುದು, ನೀರು ಹಾಗೂ ಬೆಳಕಿನ ವ್ಯವಸ್ಥೆ ಮತ್ತು ಚರಂಡಿ ವ್ಯವಸ್ಥೆ, ಈ ಎಲ್ಲಾ ಸಂಗತಿಗಳು ಯೋಜನಾಬದ್ಧವಾಗಿ ರೂಪುಗೊಂಡರೆ ಮಾತ್ರ ವ್ಯವಸ್ಥಿತ ಹಾಗೂ ಶಿಸ್ತುಬದ್ಧ ಪೇಟೆ-ಪಟ್ಟಣಗಳನ್ನು ಅಥವಾ ನಗರಗಳನ್ನು ನಿರ್ಮಿಸಲು ಸಾಧ್ಯ.

ಕೆಲವೊಂದು ಪಟ್ಟಣಗಳನ್ನು ಗಮನಿಸಿದಾಗ ಅವು ಕೋಟೆಯಿಂದ ಆವೃತ್ತವಾಗಿರುತ್ತವೆ. ಪಟ್ಟಣಗಳ ರಕ್ಷಣೆಯ ದೃಷ್ಟಿಯಿಂದ ಕೋಟೆಯ ಅಗತ್ಯವಿದೆ. ಅದೇ ರೀತಿ ನಗರವಾಸಿಗಳನ್ನು ಅಕ್ರಮಣಕಾರರಿಂದ, ಕಳ್ಳರಿಂದ ಮತ್ತು ಕ್ರೂರಪ್ರಾಣಿಗಳಿಂದ ರಕ್ಷಿಸಲು

ಕೋಟೆಯ ಅಗತ್ಯವಿತ್ತು. ಆದುದರಿಂದ ಕೋಟೆಗಳೂ ಪೇಟೆ-ಪಟ್ಟಣಗಳ ಯೋಜನೆಯಲ್ಲಿ ಬಹುಮುಖ್ಯವಾದ ಸಂಗತಿಗಳಾಗಿವೆ. ಇಂದಿಗೂ ಕೋಟೆಯಿಂದಾವೃತವಾದ ಅನೇಕ ಪಟ್ಟಣಗಳನ್ನು ನಾವು ಕಾಣಬಹುದು. ಆಧುನಿಕ ನಗರಗಳಲ್ಲಿ ಕೋಟೆಯ ಅವಶ್ಯಕತೆ ಇಲ್ಲವಾದರೂ ಪರ್ಯಾಯವಾಗಿ ನಗರಗಳ ರಕ್ಷಣೆಗೆ ಅಧಿಕಾರಿ ವರ್ಗದವರು ಇರುತ್ತಾರೆ. ಸಾಮಾನ್ಯವಾಗಿ ಜೀವನ ಹೆಚ್ಚು ಸಂಕೀರ್ಣವಾದಾಗ ಮತ್ತು ಸಮುದಾಯಗಳು ರಾಜ್ಯಗಳಾದಾಗ ಮತ್ತು ರಾಜತ್ವ ರೂಪುಗೊಂಡಾಗ ರಾಜಕೀಯ ಹಗೆತನ ಪ್ರಾರಂಭವಾಗುತ್ತದೆ. ಇದರ ಫಲವಾಗಿ ಕೋಟೆ ಕೊತ್ತಲಗಳು ನಿರ್ಮಾಣವಾದವು. ಕೊಟೆಗಳಲ್ಲಿ ಅನೇಕ ವಿಧಗಳಿವೆ ಅವುಗಳೆಂದರೆ ಗಿರಿದುರ್ಗ, ವನದುರ್ಗ, ರಥದುರ್ಗ, ಮಿಶ್ರದುರ್ಗ ಇತ್ಯಾದಿ. ಅಪರಾಧಿಗಳನ್ನು ಶಿಕ್ಷಿಸುವ ಸ್ಥಳಕ್ಕೆ ರಥದುರ್ಗವೆಂತಲೂ, ಗಿರಿ ಹಾಗೂ ವನದ ಮಧ್ಯಭಾಗದಲ್ಲಿ ನಿರ್ಮಿಸುವ ಕೋಟೆಗಳನ್ನು ಮಿಶ್ರದುರ್ಗ ಎಂತಲೂ ಕರೆಯಲಾಗಿದೆ. ಈ ರೀತಿಯ ಪೇಟೆ-ಪಟ್ಟಣಗಳು ಹೆಚ್ಚಾಗಿ ಮಧ್ಯಯುಗದಲ್ಲಿ ಕಾಣಿಸಿಕೊಂಡವು.

ನಗರೀಕರಣವು ಯಾವ ಸ್ವರೂಪದ್ದೇ ಆಗಿದ್ದರೂ ಅದು ಪರಿಸರ ಮಾಲಿನ್ಯಕ್ಕೆ ಕಾರಣವಾಗುತ್ತದೆ. ಕಟ್ಟಡಗಳನ್ನು ಸೇತುವೆಗಳನ್ನು, ಕಾಲುವೆಗಳನ್ನು, ರಸ್ತೆಗಳನ್ನು, ರೈಲು ಮಾರ್ಗಗಳನ್ನು ನಿರ್ಮಿಸುವಾಗ ಎಷ್ಟೇ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡರೂ ಅದು ಪರಿಸರನಾಶವನ್ನುಂಟು ಮಾಡಿವೆ. ನೈಸರ್ಗಿಕ ದೃಶ್ಯಗಳು, ಸುಂದರ ಪ್ರದೇಶಗಳಾದ ಕಾಡುಗಳು, ಕೆರೆಗಳು, ನದಿಗಳು, ಬೆಟ್ಟಗುಡ್ಡಗಳು ಇವೆಲ್ಲಾ ತಮ್ಮ ಸೌಂದರ್ಯ ಮತ್ತು ಸಂಪತ್ತು ಕಳೆದುಕೊಳ್ಳುವ ಪರಿಸ್ಥಿತಿಗೆ ಕಾರಣವಾಗಿವೆ. ನಗರ ಯೋಜನೆಯು ಪರಿಸರ ಸ್ವಪ್ರಜ್ಞತೆಯನ್ನು ಹೊಂದಿರಬೇಕು. ಹಾಗಿದ್ದರೆ ಮಾತ್ರ ಸಮತೋಲನವನ್ನು ಕಾಪಾಡಲು ಸಾಧ್ಯ. ಪರಿಸರ ನಗರಗಳ ಗುಣಮಟ್ಟವನ್ನು ಹೆಚ್ಚಿಸುತ್ತದೆ ಮತ್ತು ಆದರ್ಶ ಮೌಲ್ಯಗಳು ನಗರಗಳಲ್ಲಿ ಬೇರೂರುವಂತೆ ಮಾಡುತ್ತವೆ. ಪ್ರಕೃತಿ ನಗರಗಳ ಆತ್ಮವಿದ್ದಂತೆ ಆದರೆ ಇತ್ತೀಚಿನ ದಿನಗಳಲ್ಲಿ ಬೃಹತ್ ಕೈಗಾರಿಕೆಗಳು ಮತ್ತು ಉದ್ದಿಮೆಗಳು ಪ್ರಕೃತಿಯ ಮೇಲೆ ದೌರ್ಜನ್ಯವೆಸಗುತ್ತಿವೆ. ವಿಜ್ಞಾನ ಮತ್ತು ತಂತ್ರಜ್ಞಾನಗಳನ್ನು ಬಳಸಿಕೊಂಡು ನಿಸರ್ಗವನ್ನು ಗೆದ್ದು ಅಭಿವೃದ್ಧಿಯ ಹಾದಿಯಲ್ಲಿ ನಾವು ಮುಂದುವರಿಯುತ್ತಿದ್ದೇವೆ ಎನ್ನುವ ಭಾವನೆ ಬಲವಾಗಿ ಬೇರೂರಿರುವುದೇ ಪರಿಸರದ ಬಗ್ಗೆ ನಿರ್ಲಕ್ಷ್ಯವನ್ನು ತಾಳುವುದಕ್ಕೆ ಕಾರಣವಾಗಿದೆ. ನಗರಗಳ ಬೆಳವಣಿಗೆ ಗ್ರಾಮೀಣ ಪ್ರದೇಶಗಳ ಅವನತಿಗೆ ಕಾರಣವಾಗಬಾರದು. ಗ್ರಾಮ ಮತ್ತು ನಗರಗಳಲ್ಲಿ ಒಂದು ರೀತಿಯ ಒಡಂಬಡಿಕೆ ಏರ್ಪಡಬೇಕು. ಈ ಒಡಂಬಡಿಕೆ ಏರ್ಪಟ್ಟಾಗ ಮಾತ್ರ ಪರಿಸರ ತನ್ನ ಸೌಂದರ್ಯವನ್ನು ಕಾಪಾಡಿಕೊಂಡು ನಗರಗಳ ಸೌಂದರ್ಯವನ್ನೂ ಹೆಚ್ಚಿಸಲು ಸಹಕಾರಿಯಾಗಬಲ್ಲುದು. ಮಾನವನು ವಿಕಾಸ ಹೊಂದುತ್ತಾ ತನ್ನ ಅಭಿರುಚಿಯಲ್ಲೂ ಬದಲಾವಣೆಯನ್ನು ಕಾಣುತ್ತಾನಷ್ಟೆ. ಇದರಿಂದಾಗಿ ಸಹಜವಾಗಿಯೇ ನಗರೀಕರಣದ ಶೈಲಿಯೂ ಬದಲಾಗಿ ಹೊಸರೀತಿಯ ನಗರ ವ್ಯವಸ್ಥೆ ರೂಪುಗೊಳ್ಳುತ್ತದೆ. ಈ ಹೊಸ ನಗರ ವ್ಯವಸ್ಥೆಗೆ ಅನುಕೂಲವಾಗುವ ರೀತಿಯಲ್ಲಿ ಯೋಜನೆಗಳನ್ನು ರೂಪಿಸಬೇಕಾಗುತ್ತದೆ. ಪ್ರಾಚೀನ ಕಾಲದ ನಗರಗಳಿಂದ ಮಧ್ಯಯುಗೀನ

ನಗರಗಳು ಭಿನ್ನವಾದರೆ, ಮಧ್ಯಯುಗೀನ ನಗರಗಳಿಗಿಂತ ಆಧುನಿಕ ನಗರಗಳು ಭಿನ್ನವಾಗಿದೆ. ಆಧುನಿಕ ನಗರಗಳ ಆಡಳಿತವನ್ನು ನಿರ್ವಹಿಸುವ ನಗರಪಾಲಿಕೆಗಳು ಮತ್ತು ನಗರದ ಸಮಸ್ಯೆಗಳನ್ನು ಎದುರಿಸುವ ವಿವಿಧ ಸರಕಾರಿ ಇಲಾಖೆಗಳ ಅಧಿಕಾರಿ ವರ್ಗಗಳಿಗೆ ಒಟ್ಟಾರೆ ಸಮಸ್ಯೆಗಳ ಸಮಗ್ರ ಅರಿವಿನ ಅವಶ್ಯಕತೆ ಇದೆ.

ನಗರಗಳ ಅವನತಿ

ಒಂದು ಕಾಲಕ್ಕೆ ವೈಭವದಿಂದ ಮೆರೆದಿದ್ದ ನಗರಗಳು ಅವನತಿಯನ್ನು ಹೊಂದಿರುವ ಪರಿ ವಿಸ್ಮಯಕಾರಿಯಾಗಿದ್ದು ಅಧ್ಯಯನ ಯೋಗ್ಯವಾದ ವಸ್ತುವಾಗಿದೆ. ನಗರಗಳ ಹುಟ್ಟು ಜಗತ್ತಿನ ಇತಿಹಾಸದಲ್ಲಿ ಯಾವ ಬದಲಾವಣೆಯನ್ನು ತಂದಿದೆಯೋ ಅದೇ ರೀತಿ ನಗರಗಳ ಅವನತಿಯೂ ಮಹತ್ತರವಾದ ಬದಲಾವಣೆಗಳನ್ನು ಉಂಟು ಮಾಡಿದೆ. ನಗರಗಳ ಉಗಮಕ್ಕೆ ಪೂರಕವಾದ ಅಂಶಗಳು ಕಣ್ಮರೆಯಾದರೆ ಇಲ್ಲವೇ ದುರ್ಬಲವಾದರೆ ಸಹಜವಾಗಿಯೇ ನಗರಗಳು ನಾಶಹೊಂದುತ್ತವೆ. ನಗರಗಳು ದುರ್ಬಲಗೊಳ್ಳುವುದಕ್ಕೆ ಆರ್ಥಿಕ, ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯ ಸಂಗತಿಗಳು ಮುಖ್ಯ ಕಾರಣಗಳಾಗುತ್ತವೆ. ಈ ಪಟ್ಟಿಯಲ್ಲಿ ಸೇರಿಸಬಹುದಾದ ಇನ್ನಿತರ ಕಾರಣಗಳೆಂದರೆ ವಿದೇಶಿ ಆಕ್ರಮಣ, ಊಳಿಗಮಾನ್ಯ ಪದ್ಧತಿ, ಪರಿಸರ ನಾಶ ಇತ್ಯಾದಿ, ಈ ಎಲ್ಲಾ ಕಾರಣಗಳನ್ನು ನಾವು ಕೆಳಕಂಡಂತೆ ವರ್ಗೀಕರಿಸಬಹುದು. ಸ್ವಾಭಾವಿಕ ಮತ್ತು ಭೌಗೋಳಿಕ, ರಾಜಕೀಯ, ವಿದೇಶೀ ಆಕ್ರಮಣ, ಊಳಿಗ ಪದ್ಧತಿ, ಧಾರ್ಮಿಕ ನೀತಿ ಮತ್ತು ಆರ್ಥಿಕತೆ.

ಸ್ವಾಭಾವಿಕ ಮತ್ತು ಭೌಗೋಳಿಕ ಏರುಪೇರುಗಳಿಂದ ಉಂಟಾಗುವ ಸಮಸ್ಯೆಗಳಾದ ಬರಗಾಲ, ನೆರೆ, ಚಂಡಮಾರುತ, ಭೂಕಂಪ ಇವೆಲ್ಲಾ ನಗರಗಳು ದುರ್ಬಲಗೊಳ್ಳುವುದಕ್ಕೆ ಕಾರಣವಾಗುತ್ತವೆ. ಈ ಸಮಸ್ಯೆ ತಲೆದೋರಿದಾಗ ಜನರನ್ನು ರಕ್ಷಣೆಯ ದೃಷ್ಟಿಯಿಂದ ಒಂದು ಪ್ರದೇಶದಿಂದ ಇನ್ನೊಂದೆಡೆಗೆ ಸಾಗಿಸಬೇಕಾಗುತ್ತದೆ. ಇದರಿಂದಾಗಿ ನಗರಗಳ ಅವನತಿಯಾಗುತ್ತದೆ. ಪ್ರಾಕೃತಿಕ ವಿಕೋಪಗಳಿಗೆ ತುತ್ತಾಗುವ ನಗರಗಳು ಸಂಪೂರ್ಣ ನಾಶಹೊಂದುತ್ತವೆ. ಉದಾಹರಣೆಗೆ, ಹಸ್ತಿನಾಪುರ; ಗಂಗಾನದಿಯ ಪ್ರವಾಹಕ್ಕೆ ಸಿಲುಕಿ ಈ ನಗರ ಅವನತಿಯನ್ನು ಹೊಂದಿತು ಎಂಬುದಾಗಿ ಇತಿಹಾಸದಿಂದ ತಿಳಿದು ಬರುತ್ತದೆ. ಇದೇ ರೀತಿಯಾಗಿ ಅನೇಕ ನಗರಕೇಂದ್ರಗಳು ನಾಶ ಹೊಂದಿವೆ. ಹೆಚ್ಚಿನ ನಗರ ಕೇಂದ್ರಗಳು ನದೀ ದಂಡೆಯ ಮೇಲಿರುವುದರಿಂದ ಈ ಅನಾಹುತದಿಂದ ಹೊರತಾಗಿರಲು ಸಾಧ್ಯವಿಲ್ಲ.

ರಾಜಕೀಯ ಕಾರಣಗಳನ್ನು ಅವಲೋಕಿಸಿದಾಗ ಬೇರೆ ಬೇರೆ ಕಾಲಘಟ್ಟದಲ್ಲಿ ನಗರಕೇಂದ್ರಗಳು ಹಿಗ್ಗಿದ ಮತ್ತು ಕುಗ್ಗಿದ ನಿದರ್ಶನಗಳು ದೊರೆಯುತ್ತವೆ. ರಾಜಕೀಯ ಏರುಪೇರುಗಳಿಂದಾಗಿ ಅರಸು ಮನೆತನಗಳು ದುರ್ಬಲವಾದಾಗ ಅದನ್ನೇ ಆಶ್ರಯಿಸಿರುವ ನಗರ ಕೇಂದ್ರಗಳೂ ದುರ್ಬಲಗೊಂಡವು ಮತ್ತು ತಮ್ಮ ರಾಜಕೀಯ ಪ್ರಾಮುಖ್ಯತೆಯನ್ನು ಕಳಕೊಂಡವು. ಆಡಳಿತ ಕೇಂದ್ರಗಳನ್ನು ಸ್ಥಳಾಂತರಗೊಳಿಸುತ್ತಿದ್ದುದೇ ಇದಕ್ಕೆ ಮುಖ್ಯ

ಕಾರಣವಾಗಿರಬೇಕು. ಒಂದು ರಾಜವಂಶ ಅಧಿಕಾರದಲ್ಲಿರುವವರೆಗೆ ಅದರ ರಾಜಧಾನಿ ಪ್ರಾಮುಖ್ಯ ನಗರ ಕೇಂದ್ರವಾಗಿ ಬೆಳೆದಿರುತ್ತದೆ. ಆದರೆ ಇದು ಕೇವಲ ತಾತ್ಕಾಲಿಕ ಬೆಳವಣಿಗೆಯಾಗಿರುತ್ತದೆ. ಆ ವಂಶದ ಅವನತಿಯೊಂದಿಗೆ ನಗರಕೇಂದ್ರವೂ ಅವನತಿಯನ್ನು ಹೊಂದುತ್ತಿದ್ದವು. ಯಾಕೆಂದರೆ ಹೊಸದಾಗಿ ಅಧಿಕಾರಕ್ಕೆ ಬರುವ ಮನೆತನಗಳು ತಮ್ಮ ರಾಜಧಾನಿಯನ್ನು ಬದಲಾಯಿಸುತ್ತವೆ. ಇದರಿಂದಾಗಿ ಮೊದಲೇ ಅಸ್ತಿತ್ವದಲ್ಲಿದ್ದ ನಗರ ಅವನತಿಯನ್ನು ಹೊಂದಿ ಹೊಸ ನಗರಗಳು ಹುಟ್ಟಿಕೊಳ್ಳುತ್ತವೆ. ಇತಿಹಾಸದುದ್ದಕ್ಕೂ ಈ ರೀತಿಯ ಬದಲಾವಣೆಯನ್ನು ಗುರುತಿಸಬಹುದಾಗಿದೆ.

ವಿದೇಶಿಯರ ಆಕ್ರಮಣವೂ ನಗರಗಳ ಅವನತಿಗೆ ಬಹುಮುಖ್ಯವಾದ ಕಾರಣ ವಾಗಿದೆ. ಹೆಚ್ಚಾಗಿ ಪ್ರಾಚೀನ ಮತ್ತು ಮಧ್ಯಯುಗೀನ ನಗರಗಳು ಈ ಸಮಸ್ಯೆಯನ್ನು ಎದುರಿಸಿದವು. ಭಾರತದಲ್ಲಿ ಕುಶಾನರ ನಂತರದ ಅವಧಿಯಲ್ಲಿ ಹೂಣರ ಆಕ್ರಮಣದಿಂದ ಭಾರತದ ಅನೇಕ ನಗರಗಳು ನಾಶ ಹೊಂದಿದವು. ಇದರಲ್ಲಿ ರಾಜಧಾನಿ ಕೇಂದ್ರಗಳು, ಧಾರ್ಮಿಕ ಕೇಂದ್ರಗಳು ಮತ್ತು ಶೈಕ್ಷಣಿಕ ಕೇಂದ್ರಗಳು ಸೇರಿವೆ. ಹೂಣರು ಆರ್ಥಿಕ ದೃಷ್ಟಿಯನ್ನು ಇಟ್ಟುಕೊಂಡು, ಅಂದರೆ ಹಣವನ್ನು ಸಂಗ್ರಹಿಸುವುದಕ್ಕೋಸ್ಕರ ನಗರಗಳನ್ನು ನಾಶಮಾಡಿದರು. ಧರ್ಮವನ್ನೇ ಆಶ್ರಯಿಸಿ ಬೆಳೆದಿರುವ ಧಾರ್ಮಿಕ ಕೇಂದ್ರಗಳು ತಾವು ಆಶ್ರಯಿಸಿರುವ ಧರ್ಮ ತನ್ನ ಪ್ರಭಾವವನ್ನು ಕಳಕೊಂಡಾಗ ಸ್ವಾಭಾವಿಕವಾಗಿಯೇ ಅವನತಿ ಯನ್ನು ಹೊಂದುತ್ತವೆ. ಭಾರತದಲ್ಲಿ ಬೌದ್ಧಧರ್ಮ ಮತ್ತು ಜೈನ ಧರ್ಮ ಅನೇಕ ನಗರ ಕೇಂದ್ರಗಳ ಹುಟ್ಟಿಗೆ ಮತ್ತು ಏಳಿಗೆಗೆ ಕಾರಣವಾಗಿವೆ. ಆದರೆ ಆ ಧರ್ಮಗಳು ತಮ್ಮ ವರ್ಚಸ್ಸನ್ನು ಕಳಕೊಂಡಾಗ ಅದನ್ನೇ ಆಶ್ರಯಿಸಿರುವ ನಗರ ಕೇಂದ್ರಗಳೂ ಅವನತಿಯನ್ನು ಹೊಂದಿದವು. ಇದು ಜನರ ಧಾರ್ಮಿಕ ಮನೋಭಾವ ಬದಲಾದಂತೆಯೇ ನಗರ ಕೇಂದ್ರಗ ಳಲ್ಲಿ ಉಂಟಾಗುವ ಬದಲಾವಣೆಗಳು ಸ್ಪಷ್ಟ ಚಿತ್ರಣವನ್ನು ನಮ್ಮ ಮುಂದೆ ಇಡುತ್ತದೆ.

ಮೇಲೆ ಚರ್ಚಿಸಿದ ವಿಷಯಗಳು ಎಲ್ಲಾ ನಗರ ಕೇಂದ್ರಗಳಿಗೂ ಒಂದೇ ಪ್ರಕಾರವಾಗಿ ಅನ್ವಯಿಸುವುದಿಲ್ಲ. ನಗರಗಳ ಸ್ವರೂಪವನ್ನು ಹೊಂದಿಕೊಂಡು ಅವು ನಗರದಿಂದ ನಗರಕ್ಕೆ ಬದಲಾಗುತ್ತವೆ. ಆದರೆ ಆರ್ಥಿಕ ಕಾರಣಗಳು ಎಲ್ಲಾ ರೀತಿಯ ನಗರ ಕೇಂದ್ರಗಳಿಗೂ ಸಂಬಂಧಪಟ್ಟಿದ್ದಾಗಿರುತ್ತದೆ. ಆರ್ಥಿಕ ಸಂಗತಿಗಳು ನಗರಗಳ ಏಳಿಗೆ ಮತ್ತು ಅವನತಿಗೆ ಬಹುಮುಖ್ಯವಾದ ಸಂಗತಿಗಳಾಗಿವೆ. ಊಳಿಗಮಾನ್ಯ ಪದ್ಧತಿಯಿಂದಾಗಿ ಭಾರತವನ್ನೂ ಒಳಗೊಂಡಂತೆ ಪ್ರಪಂಚದ ಅನೇಕ ಭಾಗಗಳಲ್ಲಿ ನಗರಗಳು ದುರ್ಬಲಗೊಂಡಿರುವುದು ಚಾರಿತ್ರಿಕ ಸತ್ಯವಾಗಿದೆ. ಊಳಿಗಮಾನ್ಯ ಪದ್ಧತಿಯ ಏಳಿಗೆಯು ನಗರಗಳ ಅವನತಿಗೆ ಮತ್ತು ನಗರಗಳ ಏಳಿಗೆಯು ಊಳಿಗಮಾನ್ಯ ಪದ್ಧತಿಯ ಅವನತಿಗೆ ಕಾರಣವಾಗಿದೆ. ಊಳಿಗಮಾನ್ಯ ಪದ್ಧತಿಯಿಂದಾಗಿ ಪ್ರಪಂಚದ ಅನೇಕ ಪ್ರದೇಶಗಳಲ್ಲಿ ನಗರ ಕೇಂದ್ರಗಳು ನಗರೇತರ ಕೇಂದ್ರಗಳಾಗಿ ಮಾರ್ಪಾಡಾದವು. ಭೂಮಿಯನ್ನು ದಾನಕೊಡುವ ಪ್ರಕ್ರಿಯೆ ಪ್ರಾರಂಭ ವಾದಾಗ ಹಣ ತನ್ನ ಮೌಲ್ಯವನ್ನು ಕಳೆದುಕೊಂಡಿತು ಮತ್ತು ವ್ಯಾಪಾರ ತನ್ನ ವ್ಯಾಪ್ತಿಯನ್ನು ಸೀಮಿತಗೊಳಿಸುವುದು ಅನಿವಾರ್ಯವಾಯಿತು. ಅಧಿಕಾರಿಗಳಿಗೆ ಹಣದ ರೂಪದಲ್ಲಿ

ಕೊಡುತ್ತಿದ್ದ ಸಂಬಳವನ್ನು, ಭೂಮಿಯನ್ನು ಕೊಡುವ ಮೂಲಕ ಕೊಡುವ ವ್ಯವಸ್ಥೆ ಪ್ರಾರಂಭಗೊಂಡಿತು. ಈ ಬದಲಾವಣೆ ಅನೇಕ ಸ್ವತಂತ್ರ ಆರ್ಥಿಕ ಘಟಕಗಳ ಉಗಮಕ್ಕೆ ಕಾರಣವಾಗಿದೆ. ಈ ಆರ್ಥಿಕ ಘಟಕಗಳು ತಮ್ಮ ಸ್ವಾರ್ಥ ಸಾಧನೆಯಲ್ಲೇ ಮಗ್ನರಾಗುತ್ತಿದ್ದ ರಿಂದ ದೇಶದ ಪ್ರಗತಿ ಕುಂಠಿತವಾಗತೊಡಗಿತು. ಈ ಎಲ್ಲಾ ಬದಲಾವಣೆಗಳು ನಗರಗಳಿಗೆ ವಿರುದ್ಧವಾಗಿ ನಡೆದಿವೆ. ವಸಾಹತುಶಾಹಿ ಆಳ್ವಿಕೆಯ ಆರಂಭಕಾಲದಲ್ಲಿ ರಾಜಾಶ್ರಯದ ಲ್ಲಿದ್ದ ಅನೇಕ ನಗರಗಳು ದುರ್ಬಲಗೊಂಡಿರುವುದರ ಬಗ್ಗೆ ಚಾರಿತ್ರಿಕ ದಾಖಲೆಗಳು ಲಭ್ಯ ವಿವೆ. ಹಳೆಯ ವ್ಯವಸ್ಥೆಯನ್ನೇ ಆಶ್ರಯಿಸಿರುವ ನಗರ ಕೇಂದ್ರಗಳು ಹೊಸ ಆಳ್ವಿಕೆ ಪ್ರಾರಂಭ ವಾದಾಗ ಸ್ಪರ್ಧೆಯನ್ನು ನಡೆಸಲಾರದೆ ತಮ್ಮ ಪ್ರಾಮುಖ್ಯತೆಯನ್ನು ಕಳಕೊಂಡವು.

ನಗರಗಳ ಅವನತಿ ಪ್ರಾಚೀನ ಮತ್ತು ಮಧ್ಯಯುಗೀನ ನಗರಗಳಿಗೆ ಸಂಬಂಧ ಪಟ್ಟಿದ್ದಾದರೂ, ಆಧುನಿಕ ನಗರಗಳೂ ಮಿತಿಮೀರಿ ಬೆಳೆದು ಕೆಲವೊಂದು ಮೂಲಭೂತ ಅಂಶಗಳ ಅವನತಿಗೆ ದಾರಿಮಾಡಿಕೊಟ್ಟಿವೆ. ರಾಜಾಶ್ರಯವನ್ನೇ ಅವಲಂಬಿಸಿರುವ ನಗರಗಳ ಅವನತಿ ಮತ್ತು ಆಧುನಿಕ ನಗರಗಳ ಅವನತಿ ಬೇರೆ ಬೇರೆಯಾಗಿದೆ. ಆಧುನಿಕ ನಗರಗಳಲ್ಲಿ ನಾವು ಇಂದು ಗಮನಿಸುತ್ತಿರುವ ಅತಿರೇಕದ ನಗರೀಕರಣ ಮತ್ತು ಅರೆ ನಗರೀಕರಣ ದಿಂದಾಗಿ ಸಾಮಾಜಿಕ ಮೌಲ್ಯಗಳ ಕುಸಿತ, ಅನೈತಿಕತೆ, ನಗರ ಮಾಲಿನ್ಯ, ಅಮಾನವೀಯ ಸಂಬಂಧಗಳು ಉಂಟಾಗಿ ಮಾನವ ಯಾಂತ್ರಿಕ ಬದುಕನ್ನು ನಡೆಸುವಂತೆ ಒತ್ತಡವನ್ನು ಹೇರುತ್ತಿವೆ. ಈ ಬೆಳವಣಿಗೆಗಳು ಮಾನವೀಯ ಸಂಬಂಧಗಳ ಅವನತಿಗೆ ಕಾರಣವಾಗು ತ್ತವೆ. ಆದರೆ ಇಲ್ಲಿ ರಸ್ತೆಗಳು, ಕಟ್ಟಡಗಳು ನಾಶವಾಗುವ ಬದಲು ಬೃಹತ್ ವಾಣಿಜ್ಯ ಸಂಕೀರ್ಣಗಳು, ಕಾಂಕ್ರೀಟ್ ರಸ್ತೆಗಳು ನಿರ್ಮಾಣವಾಗುತ್ತಲೇ ಇರುತ್ತವೆ. ಇದು ಮಾನವನ ಸಮಗ್ರ ಜನಜೀವನದ ಮಟ್ಟದ ಉನ್ನತಿಯೆಂದು ಭಾವಿಸುವುದು ಮೂಢತನ. ಇಲ್ಲಿ ನಗರವಾಸಿಗಳ ಮಾನಸಿಕ ಸಮತೋಲನವನ್ನು ಕಾಪಾಡುವುದು ಪ್ರಾಥಮಿಕ ಅವಶ್ಯಕತೆಯಾಗಿದೆ.

ಉಪಸಂಹಾರ

ನಗರಗಳ ಅಧ್ಯಯನವು ಇತ್ತೀಚಿನ ಬೆಳವಣಿಗೆಯಾದರೂ, ನಗರಗಳ ಇತಿಹಾಸವು ಮಾನವನ ನಾಗರಿಕತೆಯ ಉಗಮದಿಂದಲೇ ಪ್ರಾರಂಭವಾಗಿದೆ ಎನ್ನುವ ಅಂಶ ಇತಿಹಾಸದಿಂದ ನಮಗೆ ತಿಳಿದು ಬರುತ್ತದೆ. ಅಲೆಮಾರಿ ಗುಂಪುಗಳು ಒಂದೇ ಕಡೆ ನೆಲೆನಿಂತು ಖಾಯಂ ಆಗಿ ವೃತ್ತಿಯಲ್ಲಿ ತೊಡಗಿದ್ದು ನಗರೀಕರಣದ ಪ್ರಕ್ರಿಯೆಯ ಪ್ರಥಮ ಹೆಜ್ಜೆಯಾಗಿದೆ. ವ್ಯಾಪಾರಕ್ಕೆ ಎಡೆ ಮಾಡಿಕೊಟ್ಟು, ನಗರಕೇಂದ್ರಗಳು ಅಸ್ತಿತ್ವಕ್ಕೆ ಬರಲು ದಾರಿಯಾಯಿತು. ನಗರಗಳ ಉಗಮಕ್ಕೆ ಪೂರಕವಾದ ಅಂಶಗಳು ಪ್ರಬಲವಾಗುತ್ತಾ ಬಂದ ಹಾಗೆ ನಗರಗಳು ತಮ್ಮ ಸ್ವರೂಪದಲ್ಲಿ ಬದಲಾಗುತ್ತಾ ಹಂತ ಹಂತವಾಗಿ ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸುತ್ತಾ ಮಾನವನ ಬದುಕಿನ ಹೊಸ ಆಯಾಮಗಳು ರೂಪುಗೊಳ್ಳುವುದಕ್ಕೆ ಸಹಕಾರಿಯಾಗಿರುವ ಸಂಗತಿಯನ್ನು ನಾನು ಈಗಾಗಲೇ ಇಲ್ಲಿ

ಚರ್ಚಿಸಿದ್ದೇನೆ. ಈ ಅಧ್ಯಯನ ನಗರಗಳ ಸಾಮಾನ್ಯ ನೋಟವಾಗಿದ್ದು, ನಗರ ಕೇಂದ್ರಗಳ ಸ್ವರೂಪ ಬದಲಾಗುತ್ತಿದ್ದಂತೆಯೇ ನಗರಗಳ ಯೋಜನೆ ಆಡಳಿತ, ಸಂಪನ್ಮೂಲ, ಸಂಸ್ಕೃತಿ ಮತ್ತು ಉತ್ಪಾದನಾ ಶಕ್ತಿಯಲ್ಲಾಗುವ ಏರುಪೇರುಗಳು ಆಯಾ ಕಾಲದ ಇತಿಹಾಸದ ಮೇಲೆ ಬೀರುವ ಪ್ರಭಾವವನ್ನೂ ಕೂಲಂಕಷವಾಗಿ ಅಧ್ಯಯನ ಮಾಡಲಾಗಿದೆ. ಇತಿಹಾಸ ದಂತೆಯೇ ನಗರೀಕರಣವೂ ಒಂದು ನಿರಂತರ ಪ್ರಕ್ರಿಯೆಯಾದ (Continuous Process) ಕಾರಣ ಇತಿಹಾಸದಲ್ಲಿ ನಗರೀಕರಣವನ್ನು ಅಧ್ಯಯನ ಮಾಡುವುದು ಹೆಚ್ಚು ಅರ್ಥವತ್ತಾಗಿರುತ್ತದೆ ಮತ್ತು ಇತಿಹಾಸದ ಸಂಗತಿಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ಸಹಕಾರಿಯಾಗುತ್ತದೆ. ಇತ್ತೀಚಿನ ವರ್ಷಗಳಲ್ಲಿ ಜಗತ್ತಿನಾಧ್ಯಂತ ನಗರೀಕರಣದ ಅಧ್ಯಯನದ ಬಗ್ಗೆ ವಿದ್ವಾಂಸರು ಗಮನಹರಿಸಿದ್ದು ನಗರಗಳ ಸಮಗ್ರ ಅಧ್ಯಯನದ ದೃಷ್ಟಿಯಿಂದ ಗುಣಾತ್ಮಕವಾದ ಬೆಳವಣಿಗೆಯಾಗಿದೆ. ಆದರೆ ಈ ಸಂಶೋಧನೆಗಳು ಏಕಮುಖಿಯಾಗಿರದೆ ಅಂದರೆ ನಗರಗಳನ್ನು ಕೇವಲ ಮಾನವ ಜೀವನದ ಪ್ರಗತಿಯ ಸಂಕೇತವನ್ನಾಗಿ ಮಾತ್ರ ನೋಡದೆ ನಗರಗಳ ಹೃದಯದಲ್ಲಿ ಹುದುಗಿರುವ ಭೀಕರ ಸಮಸ್ಯೆಗಳ ಕಡೆಗೂ ಗಮನ ಹರಿಸುವಂತಾಗಬೇಕು.

ಪರಾಮರ್ಶನ ಗ್ರಂಥಗಳು

೧. ಶರ್ಮ ಆರ್. ಯಸ್, : ಅರ್ಬನ್ ಡಿಕೇ, ಡೆಲ್ಲಿ ೧೯೮೭.

೨. ಶರ್ಮ ಆರ್. ಯಸ್. : ಸೋಶ್ಯಲ್ ಚೇಂಜಸ್ ಇನ್ ಅರ್ಲಿಮಿಡೀವಲ್ ಇಂಡಿಯಾ, ಕ್ರಿ. ಶ. ೫೦೦-೧೨೦೦ ಡೆಲ್ಲಿ, ೧೯೬೯.

೩. ಟಾಕೂರ್, ವಿಜಯಕುಮಾರ : ಅರ್ಬನೈಸೇಷನ್ ಇನ್ ಏನ್‌ಶ್ಯಂಟ್ ಇಂಡಿಯಾ, ಡೆಲ್ಲಿ ೧೯೮೧.

೪. ಹೇರ್ಲ್ಲೋಯಿ, ಮಿಕಾಯಿಲ್ : ನ್ಯೂ ಪರಸ್ಪೆಕ್ಟಿವ್‌ಸ್ ಇನ್ ಅರ್ಬನ್ ಚೇಂಜ್ ಆ್ಯಂಡ್ ಕಾನ್‌ಫ್ಲಿಕ್ಟ್, ೧೯೮೧.

೫. ಡೇವಿಸ್‌ಷ ಕಿಂಗ್‌ಸ್ಲೀ : ವರ್ಲ್ಡ್ ಅರ್ಬನೈಸೇಷನ್, ಕ್ಯಾಲಿಫೋರ್ನಿಯಾ,೧೯೬೯

೬. ಘೋಷ. ಎ, : ಸಿಟೀಸ್ ಇನ್ ಅರ್ಲೀ ಹಿಸ್ಟಾರಿಕಲ್ ಇಂಡಿಯಾ, ಸಿಮ್ಲಾ ೧೯೭೩.

೭. ವೀಲರ್, ಮೋರ್ಟಿಮರ್ : ದ ಇಂಡಸ್ ಸಿವಿಲೈಸೇಷನ್, ಕೇಂಬ್ರಿಡ್ಜ್, ೧೯೫೩

೮. ಅರ್ನೋಲ್ಡ್, ಎಡವರ್ಡ್ (ಸಂ) : ದ ಸ್ಟಡೀ ಆಫ್ ಅರ್ಬನ್ ಹಿಸ್ಟರಿ, ೧೯೬೮.

೯. ಹಿಲ್ಟನ್ ರೋಡ್ನೀ : ಟ್ರಾನ್ಸಿಷನ್ ಫ್ರಮ್ ಫ್ಯೂಡಾಲಿಸಮ್ ಟು ಕ್ಯಾಪಿಟಾಲಿಸಮ್, ವರ್ಸೊ, ಲಂಡನ್ ೧೯೭೯.

೧೦. ರಾವ್ ಯಸ್, ಆರ್. : ಲೊಥಾಲ್ ಆ್ಯಂಡ್ ದ ಇಂಡಸ್ ಸಿವಿಲೈಸೇಷನ್.

೧೧. ಸಿಡ್ನೀ, ಟೋಮ್, : ದ ಪೋರ್ಟಿಫೈಡ್ ಸಿಟೀಸ್ ಆಫ್ ಇಂಡಿಯಾ, ಲಂಡನ್ ೧೯೬೫

೧೨. ಮಂಡಲ್, ಆರ್. ಬಿ ಆ್ಯಂಡ್ ಪೀಟರ್‌ಷ ಜಿ. ಯಲ್ (ಸಂ) : ಅರ್ಬನೈಸೇಷನ್ ಆ್ಯಂಡ್ ರೀಜನಲ್ ಡೆವಲಪ್‌ಮೆಂಟ, ನ್ಯೂಡೆಲ್ಲಿ, ೧೯೮೨

೧೩. ನಾಖ್ವಿ, ಹಮೀದ ಖಾಟೂನ : ಅರ್ಬನೈಸೇಷನ್ ಆ್ಯಂಡ್ ಅರ್ಬನ್ ಸೆಂಟರ್‍ಸ್, ಸಿಮ್ಲಾ, ೧೯೬೨.

೧೪. ಪೆರ್ರೀ, ಜಾನ್ ಎ, ಮತ್ತು ಪೆರ್ರೀ, ಎರ್ನಾ ಕೆ, : ದ ಸೋಶ್ಯಲ್ ವೆಬ್ ಆ್ಯನ್ ಕಾಂಟ್ರಿಬ್ಯೂಷನ್ ಟು ಟು ಸೊಶ್ಯಾಲಜಿ, ನ್ಯೂಯಾರ್ಕ್, ೧೯೯೩.

೧೫. ಬ್ಲೋಕ್, ಮಾರ್ಕ್ : ಫ್ಯೂಡಲ್ ಸೊಸೈಟಿ, ಲಂಡನ್ ೧೯೬೧

೧೬. ಡೀನ್, ಫಿಲ್ಲೀಸ್, : ದ ಫಸ್ಟ್ ಇಂಡಸ್ಟ್ರಿಯಲ್ ರೆವಲ್ಯೂಷನ್, ಕೇಂಬ್ರಿಡ್ಜ್ ಯೂನಿವರ್ಸಿಟಿ ಪ್ರೆಸ್, ೧೯೯೪.

ಮಂಟಪಮಾಲೆ

೩೦

ಹಂಪಿಯ ಕನ್ನಡ ವಿಶ್ವವಿದ್ಯಾಲಯ ವಿದ್ಯೆಯನ್ನು ಕಲಿಯಲು ಅನುವು ಮಾಡಿಕೊಡುವ ಒಂದು ಸಂಸ್ಥೆಯೇ ಹೊರತು ಅದು ವಿದ್ಯೆಯನ್ನು ಕಲಿಸುವ ಸಂಸ್ಥೆಯಲ್ಲ. ನಮ್ಮ ನಾಡಿನಲ್ಲಿ ಹಳೆಯ ಕಾಲದ ತಿಳುವಳಿಕೆಯೊಂದಿದೆ. ಅಲ್ಲದೆ ಪಶ್ಚಿಮದಿಂದ ಹರಿದು ಬರುತ್ತಿರುವ ಜ್ಞಾನ ಪ್ರವಾಹವೂ ಇದೆ. ಈ ಎರಡೂ ತಿಳುವಳಿಕೆಗಳು ಒಂದಕ್ಕೊಂದು ಸಂಧಿಸಿ ಬೆಳಕನ್ನು ಉಂಟು ಮಾಡಿವೆ. ಜೊತೆಗೆ ದಿಗ್ಭ್ರಮೆಯನ್ನೂ ತಂದಿವೆ. ಈ ತಿಳುವಳಿಕೆಗಳ ವಿವೇಕದ ವಿನಿಯೋಗ ಇಂದು ಅಗತ್ಯವಾಗಿದೆ. ಇಂಥ ವಿನಿಯೋಗಕ್ಕಾಗಿ ಹೊಸ ಬಗೆಯ ಶಾಸ್ತ್ರ ವಿಧಾನಗಳು ನಮಗಿಂದು ಬೇಕಾಗಿವೆ. ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ಸಂಶೋಧನೆಯ ಗುರಿಯೆಂದರೆ ಈ ಶಾಸ್ತ್ರ ವಿಧಾನಗಳ ನಿರ್ಮಾಣ.

ನಾವು ನಮ್ಮ ನಮ್ಮಲ್ಲಿ ವಿಚಾರ ವಿನಿಮಯ ನಡೆಸಲು, ಒಬ್ಬರ ಅರಿವನ್ನು ಎಲ್ಲರೂ ಹಂಚಿಕೊಳ್ಳಲು ವಿಶ್ವವಿದ್ಯಾಲಯದಲ್ಲಿ ಪ್ರತಿವಾರ ಮಂಟಪ ಎಂಬ ಕಾರ್ಯಕ್ರಮ ನಡೆಸುತ್ತೇವೆ. ಅಲ್ಲಿ ಹೊಮ್ಮಿದ ವಿಚಾರಗಳು ನಮ್ಮ ಅರಿವನ್ನು ಹೆಚ್ಚಿಸಿದಂತೆ ನಿಮಗೂ ಲಾಭದಾಯಕ ವಾಗುವವೆಂಬ ನಂಬಿಕೆಯಿಂದ ಕಡಿಮೆ ಬೆಲೆಯ ಕಿರು ಪುಸ್ತಿಕೆಗಳ ರೂಪದಲ್ಲಿ ಅವನ್ನು ಪ್ರಕಟಿಸಿ ನಿಮ್ಮ ಕೈಗಿಡುತ್ತಿದ್ದೇವೆ.

ಡಾ. ಚಂದ್ರಶೇಖರ ಕಂಬಾರ
ಕುಲಪತಿಯವರು

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ